International Journal of Kannada Research 2019; 5(4): 96-103

International Journal of Kannada Research
www.kannadajournal.com

**ISSN: 2454–5813**
IJKR 2019; 5(4): 96-103
© 2019 IJKR
www.kannadajournal.com
Received: 25-08-2019
Accepted: 27-09-2019

**ಡಾ ಶುಭಕರಾಚಾರಿ**
ಸಹಾಯಕ ಪ್ರಾಧ್ಯಪಕರು
ಭಂಡಾರ್‌ಕಾರ್ಸ್ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜು
ಕುಂದಾಪುರ, ಉಡುಪಿ ಜಿಲ್ಲೆ

**Corresponding Author:**
**ಡಾ॥ ಶುಭಕರಾಚಾರಿ**
ಸಹಾಯಕ ಪ್ರಾಧ್ಯಪಕರು
ಭಂಡಾರ್‌ಕಾರ್ಸ್ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜು
ಕುಂದಾಪುರ, ಉಡುಪಿ ಜಿಲ್ಲೆ

# ಕಮ್ಮಾರರ ಬದುಕಿನ ಸ್ಥಿತ್ಯಂತರಗಳು (ಮಂಗಳೂರು, ಉಡುಪಿ ಜಿಲ್ಲೆ, ಕೊಳ್ಳೆಗಾಲ ತಾಲೂಕನ್ನು ಅನುಲಕ್ಷಿಸಿ)

**ಡಾ ಶುಭಕರಾಚಾರಿ**

ಕ್ರಿ.ಪೂ. ಯುಗದಿಂದ ಇಡೀ ವಿಶ್ವ ಉತ್ಪಾದನಾ ವ್ಯವಸ್ಥೆಗೆ ತಮ್ಮದೆ ಆದಂತಹ ಕೊಡುಗೆಗಳನ್ನು ನೀಡುತ್ತಲೇ ಬಂದಿದೆ. ಮೂಲ ಮಾನವ ಕೃಷಿಯ ಮೂಲಕ ಆಹಾರ ಉತ್ಪಾದನೆ ಪ್ರಾರಂಭಿಸಿದ ಮೇಲೆ ಅವನ ಉತ್ಪಾದನೆ ಬೇಕಾಗುವ ಅನೇಕ ಕೃಷಿ ಉಪಕರಣಗಳನ್ನು ಸೃಷ್ಟಿಸುವ ಮೂಲಕ ತಮ್ಮ ಅಸ್ತಿತ್ವವನ್ನು ಕಮ್ಮಾರರು ಗುರುತಿಸಿಕೊಳ್ಳ ತೊಡಗಿದರು. ಪ್ರಕೃತಿಯ ಕೊಡುಗೆಯಾದ ಬೆಂಕಿಯನ್ನು ಬಳಸಿಕೊಂಡು ಸಾವಿರಾರು ವರ್ಷಗಳವರೆಗೆ ಅನೇಕ ನಿಕ್ಷೇಪಗಳನ್ನು ಪತ್ತೆ ಹಚ್ಚಿ ಅದನ್ನು ಸಂಸ್ಕರಿಸುವಲ್ಲಿ ಯಶಸ್ವಿಯಾದರು. ಕಮ್ಮಾರರು ಕಬ್ಬಿಣದ ಶೋಧನೆ ಮತ್ತು ಸಂಸ್ಕರಣೆಯನ್ನು ಕಂಡುಕೊಂಡ ಮೇಲೆ ಉತ್ಪಾದನಾ ವ್ಯವಸ್ಥೆ ಮತ್ತು ಕಮ್ಮಾರರ ಘನತೆ ಗೌರವಗಳು ಅಭಿವೃದ್ಧಿ ಹೊಂದ ತೊಡಗಿದವು.
ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶನಾಲಯಗಳ ಪ್ರಕಾರ ಅವಿಭಜಿತ ದಕ್ಷಿಣಕನ್ನಡ ಹಾಗೂ ಕೊಳ್ಳೆಗಾಲ ತಾಲೂಕುಗಳಲ್ಲಿ ಕಮ್ಮಾರ, ಕೊರಗ, ಮಲೆಕುಡಿಯ, ಮರಾಠಿ ಬುಡಕಟ್ಟುಗಳಿವೆ. ಈ ಬುಡಕಟ್ಟುಗಳಲ್ಲಿ ಕಮ್ಮಾರ ಬುಡಕಟ್ಟು ಪ್ರಮುಖವಾದದ್ದು.

**ಅಧ್ಯಯನದ ಉದ್ದೇಶ**
1. ಕಮ್ಮಾರ ಸಮುದಾಯದ ಸಾಮಾಜಿಕ ಅಂಶಗಳಾಗಿರುವ ಕುಟುಂಬ, ವಿವಾಹ, ಬಂಧುತ್ವ ಪದ್ಧತಿಗಳನ್ನು ಮತ್ತು ಅವರ ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು.
2. ಕಮ್ಮಾರರ ವಿವಾಹ ಮತ್ತು ಬಂಧುತ್ವಗಳಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸಿ ಕಾರಣಗಳನ್ನು ವಿಶ್ಲೇಷಿಸುವುದು.

**ಅಧ್ಯಯನದ ವ್ಯಾಪ್ತಿ**
ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಹಾಗೂ ಕೊಳ್ಳೆಗಾಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ವಾಸ್ತವ್ಯವಿರುವ ಕಮ್ಮಾರ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಅಧ್ಯಯನದ ವಿಧಾನ**
ಪ್ರಸ್ತುತ ಅಧ್ಯಯನವು ಕ್ಷೇತ್ರ ಕಾರ್ಯಾಧಾರಿತ ಅಧ್ಯಯನವಾಗಿದೆ. ಪ್ರಾಥಮಿಕ ಮಾಹಿತಿಗಳ ಮೂಲಗಳಾದ ಪ್ರಶ್ನಾವಳಿ, ಸಂದರ್ಶನ ಮತ್ತು ಅವರುಗಳು ವಾಸವಿರುವ ಗ್ರಾಮಗಳಿಗೆ ಭೇಟಿ ನೀಡಿ ಕೂಲಂಕುಶವಾಗಿ ಅವಲೋಕಿಸಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅನುಷಂಗಿಕ ಮಾಹಿತಿಯ ಮೂಲಗಳಲ್ಲಿರುವ ಮಾಹಿತಿಗಳನ್ನು ಪಡೆದು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

**ಮುಖ್ಯ ಪದಗಳು**
ಕಮ್ಮಾರ, ಬದಲಾವಣೆ, ಸ್ಥಿತ್ಯಂತರಗಳು, ವಿವಾಹ, ಬಂಧುತ್ವ, ಕುಟುಂಬ, ರಕ್ತಸಂಬಂಧ.

## ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

**ಪ್ರಸ್ತಾವನೆ**
ಕ್ರಿ.ಪೂ. ಯುಗದಿಂದ ವಿಶ್ವಕ್ಕೆ ಹಾಗೂ ಮಾನವನ ಕುಲಕ್ಕೆ ಉತ್ಪಾದನಾ ವ್ಯವಸ್ಥೆಗೆ ಹಾಗೂ ನಾಗರಿಕತೆಗೆ ತಮ್ಮದೆ ಆದಂತಹ ಕೊಡುಗೆಗಳನ್ನು ಕಮ್ಮಾರ ಸಮುದಾಯವು ನೀಡುತ್ತಲೆ ಬಂದಿದೆ.

ಮೂಲ ಮಾನವ ಕೃಷಿಯ ಮೂಲಕ ಆಹಾರ ಉತ್ಪಾದನೆ ಪ್ರಾರಂಭಿಸಿದ ಮೇಲೆ ಅವನ ಉತ್ಪಾದನೆಗೆ ಬೇಕಾಗುವಂತಹ ಅನೇಕ ಕೃಷಿ ಉಪಕರಣಗಳನ್ನು ಸೃಷ್ಟಿಸುವ ಮೂಲಕ ತಮ್ಮ ಅಸ್ತಿತ್ವವನ್ನು ಕಮ್ಮಾರರು ಗುರುತಿಸಿಕೊಳ್ಳ ತೊಡಗಿದರು. ಪ್ರಕೃತಿಯ ಕೊಡುಗೆಯಾದಂತಹ ಬೆಂಕಿಯನ್ನು ಬಳಸಿಕೊಂಡು ಸಾವಿರಾರು ವರುಷಗಳವರೆಗೆ ಅನೇಕ ನಿಕ್ಷೇಪಗಳನ್ನು ಪತ್ತೆ ಹಚ್ಚಿ ಅದನ್ನು ಸಂಸ್ಕರಿಸುವಲ್ಲಿ ಯಶಸ್ವಿಯಾದರು. ಈ ಸಮುದಾಯವು ಕಬ್ಬಿಣದ ಶೋಧನೆ ಮತ್ತು ಸಂಸ್ಕರಣೆಯನ್ನು ಕಂಡುಕೊಂಡ ಮೇಲೆ ಉತ್ಪಾದನಾ ವ್ಯವಸ್ಥೆ ಮತ್ತು ಕಮ್ಮಾರರ ಘನತೆ ಗೌರವಗಳು ಅಭಿವೃದ್ಧಿ ಹೊಂದ ತೊಡಗಿದವು.

ಈ ವೃತ್ತಿಯನ್ನು ಅನುಸರಿಸುತ್ತಿದ್ದ ಸಮುದಾಯವು ವೇದ ಕಾಲಕ್ಕಿಂತ ಪೂರ್ವದಲ್ಲಿಯೇ ಇದ್ದಿತು. ಇವರು ವೇದ ಕಾಲಕ್ಕಿಂತಲೂ ಮೊದಲೆ ಮಾನವನಿಗೆ ಬೇಟೆಯಾಡಲು, ಆತ್ಮರಕ್ಷಣೆ ಮಾಡಿಕೊಳ್ಳಲು ಬೇಕಾದ ಅನೇಕ ಆಯುಧಗಳನ್ನು ಸಿದ್ಧಪಡಿಸಿ ಪೂರೈಸುತ್ತಿದ್ದರು. ಬೇಟೆ ಸಂಸ್ಕೃತಿಯ ಎರಡನೇ ಹಂತದಲ್ಲಿ ದುಷ್ಟ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಆಯುಧಗಳನ್ನು ಸಿದ್ಧಪಡಿಸುತ್ತಿದ್ದರು. ಮೂಲ ಮಾನವನು ಬೇಟೆಯಿಂದ ಕೃಷಿಯನ್ನು ಕಂಡುಕೊಂಡ ಮೇಲೆ ಕೃಷಿಗೆ ಬೇಕಾದಂತಹ ಅನೇಕ ಉಪಯುಕ್ತವಾದ ವಸ್ತುಗಳನ್ನು ತಯಾರಿಸುವಲ್ಲಿ ಕಮ್ಮಾರರು ನಿರತರಾದರು ಎಂದು ತಿಳಿಯುತ್ತದೆ. ದಕ್ಷಿಣ ಭಾರತದಲ್ಲಿ ನೆಲೆಸಿರುವ ಕಮ್ಮಾರರು ದ್ರಾವಿಡ ಸಂಸ್ಕೃತಿಯಲ್ಲೆ ಗುರುತಿಸಿಕೊಂಡರು. ಬೆಂಕಿಯ ಮೂಲಕ ಕಬ್ಬಿಣ ಕರಗಿಸಿಕೊಂಡು ಅದರಿಂದ ಅನೇಕ ವಸ್ತುಗಳನ್ನು ತಯಾರಿಸಿಕೊಳ್ಳಲು ಸಾಧ್ಯ ಎಂಬುದನ್ನು ಅರಿತ ಮಾನವ ಆ ಬೆಂಕಿಯನ್ನು "ಕಾಳಿ" ಎಂದೂ ಆರಾಧಿಸುತ್ತಿರುವುದನ್ನು ಕಾಣುತ್ತೇವೆ. ತಮ್ಮ ಕುಲುಮೆಯನ್ನು ಕೂಡಾ ಕಾಳಿ ಎಂದು ಆರಾಧಿಸುವುದು ಕಂಡು ಬರುತ್ತದೆ.

ಕೃಷಿ ಉತ್ಪಾದನೆ ಹೆಚ್ಚಾಗುತ್ತಾ ಕಮ್ಮಾರರ ವೃತ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯ ತೊಡಗಿದವು. ರಾಜ ಮಹಾರಾಜರಿಗೆ ಈ ಕಮ್ಮಾರರು ಸಿದ್ಧಪಡಿಸಿ ಕೊಡುತ್ತಿದ್ದರು. ಇದರಿಂದಾಗಿ ಕಮ್ಮಾರಿಕೆ ವೃತ್ತಿ ಒಂದು ಕಾಲಕ್ಕೆ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿ ಹೊರ ಹೊಮ್ಮಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಕಮ್ಮಾರರು ನಾಡಿನ ಜನರ ಅವಶ್ಯಕತೆಗಳನ್ನು ಪೂರೈಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಶಿಲ್ಪಗಳಿಗೆ ಶಿಲೆಗಳನ್ನು ಕೆತ್ತಲು ಕಬ್ಬಿಣದ ಚಿಕ್ಕ, ಚಿಕ್ಕ ಚಿಕ್ಕ ಆಯುಧಗಳನ್ನು ಮಾಡಿಕೊಡುತ್ತಿದ್ದರು. ಈ ಕಮ್ಮಾರರು ಎಲೆ ಮರೆಯ ಕಾಯಿಯಂತಿದ್ದರೂ ಅವರು ಈ ನಾಡಿಗೆ ನೀಡಿದ ಕೊಡುಗೆ ಅಪಾರವಾದಂತಹದ್ದು.

ಇಂದು ಜಾಗತೀಕರಣ, ನಗರೀಕರಣ, ವೈಜ್ಞಾನಿಕರಣಗಳ ಭರಾಟೆಯ ನಡುವೆ ಇಂದು ತಮ್ಮ ಮೂಲ ವೃತ್ತಿಗಳ ಮೂಲಕವೇ ಈ ಸಮುದಾಯ ಬದುಕುತ್ತಿದೆ. ವೈಜ್ಞಾನಿಕರಣದಿಂದಾಗಿ ಇವರ ವೃತ್ತಿಯು ನಿರ್ಲಕ್ಷಕ್ಕೊಳಪಟ್ಟಿದೆ. ಈಗ ಕೃಷಿಗೆ ಬೇಕಾಗಿರುವ ಉಪಕರಣಗಳನ್ನು ಮಾತ್ರ ಕಮ್ಮಾರರು ತಯಾರಿಸುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಈ ಎಲ್ಲಾ ವಸ್ತುಗಳು ಕಡಿಮೆ ಬೆಲೆಗೆ ದೊರೆಯುವುದರಿಂದ ಕೃಷಿಕರು ಕಮ್ಮಾರರನ್ನು ಬಿಟ್ಟು ನೇರವಾಗಿ ನಗರ ಪ್ರದೇಶಗಳಿಂದ ಖರೀದಿಸುತ್ತಿದ್ದಾರೆ. ವೈಜ್ಞಾನಿಕರಣದ ಮುಂದೆ ಕಮ್ಮಾರರ ಪಾರಂಪರಿಕ ವೃತ್ತಿಗಳು ನಿಲ್ಲಲಾರದೇ ಮಾಯಾವಾಗುತ್ತಿವೆ.

ಕರ್ನಾಟಕದಲ್ಲಿ ವಾಸಿಸುತ್ತಿರುವ ಎಲ್ಲಾ ಕಮ್ಮಾರರ ಬದುಕು ಅತಂತ್ರ ಸ್ಥಿತಿಯಲ್ಲಿದೆ ಎಂದು ಹೇಳಬಹುದು. ಕರ್ನಾಟಕ ಸರ್ಕಾರ ಮಂಗಳೂರು, ಉಡುಪಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ ವಾಸಿಸುತ್ತಿರುವ ಕಮ್ಮಾರರನ್ನು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸಿದೆ. ಆದರೆ ಈ ಪ್ರದೇಶದಲ್ಲಿರುವ ಕಮ್ಮಾರರಿಗೆ ಪರಿಶಿಷ್ಟ ಪಂಗಡದ ಸೌಲಭ್ಯಗಳು ಇರುವುದು ಗೊತ್ತಿಲ್ಲ ಹಾಗೂ ಅದರ ಸದುಪಯೋಗವನ್ನು ಈ ಸಮುದಾಯ ಪಡೆದಿಲ್ಲ ಎಂಬುದು ಕ್ಷೇತ್ರಕಾರ್ಯಕ್ಕೆ ಹೋದಂತಹ ಸಂದರ್ಭದಲ್ಲಿ ಗಮನಿಸಲಾಗಿದೆ.

ಈ ಕಮ್ಮಾರಿಕೆ ವೃತ್ತಿಯನ್ನು ಮಾಡುವವರೆಲ್ಲರೂ ವಿಶ್ವಕರ್ಮರೇ ಆಗಿದ್ದಾರೆ. ಕಮ್ಮಾರಿಕೆ ವೃತ್ತಿಯು ವಿಶ್ವಕರ್ಮ ಜನಾಂಗದ ಇತರೆ ವೃತ್ತಿಯ ಜನರು ಅವರನ್ನು ಕೀಳಾಗಿ ಕಾಣುತ್ತಿದ್ದರು ಎಂಬ ಮಾಹಿತಿಯನ್ನೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿದರು. ಈ ಮಂಗಳೂರು ಮತ್ತು ಉಡುಪಿ ಭಾಗದ ವಿಶ್ವಕರ್ಮರು ಸಾಮಾನ್ಯವಾಗಿ ವೈದಿಕ ಧರ್ಮದೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ಕಮ್ಮಾರರು ವಿಶ್ವಕರ್ಮರೇ ಆಗಿರುವುದರಿಂದ ಅವರನ್ನು ವೈದಿಕ ಧರ್ಮ ಆಕರ್ಷಿಸುತ್ತಿರುವುದರಿಂದ ಕಮ್ಮಾರರು ಪರಿಶಿಷ್ಟ ಪಂಗಡಕ್ಕೆ ಸರ್ಕಾರವು ನೀಡುತ್ತಿರುವ ಸೌಲಭ್ಯಗಳನ್ನೂ ಪಡೆದುಕೊಳ್ಳುತ್ತಿಲ್ಲ. ನಾವು ಈ ಸೌಲಭ್ಯ ಪಡೆದುಕೊಂಡರೆ ವಿಶ್ವಕರ್ಮ ಜನಾಂಗದ ಇತರೆ ಕಸಬುಗಳನ್ನು ಮಾಡುತ್ತಿರುವ ಜನರಿಂದ ದೂರ ಉಳಿಯುತ್ತೇವೆ. ನಮ್ಮ ಸಾಮಾಜಿಕ ಸ್ಥಾನಮಾನಗಳಿಗೆ ಧಕ್ಕೆ ಉಂಟಾಗುತ್ತದೆ ಎಂಬ ಭಯ ಹಾಗೂ ಆಂತರಿಕ ಕಮ್ಮಾರರಲ್ಲಿದೆ. ಆದರೆ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಅನೇಕ ಕಮ್ಮಾರ ಕುಟುಂಬಗಳು ಪರಿಶಿಷ್ಟ ಪಂಗಡದ ಸೌಲಭ್ಯಗಳನ್ನು ತಮ್ಮದಾಗಿಸಿಕೊಂಡು ಆಧುನಿಕ ಜಗತ್ತಿನಲ್ಲಿ ಬದುಕಲು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ.

ಆಧುನಿಕ ಯಂತ್ರೋಪಕರಣಗಳು ಬಂದ ಮೇಲೆ ನಿರಂತರವಾಗಿ ದುಡಿಯುತ್ತಿರುವ ಕಮ್ಮಾರರ ಕೆಲಸಗಳನ್ನು ಕಿತ್ತುಕೊಂಡಿದ್ದರೂ ಪಾರಂಪರಿಕ ಜ್ಞಾನ ಮತ್ತು ಸಂಸ್ಕೃತಿಯಲ್ಲಿ ಹೊಸ ರೂಪ ಪಡೆದುಕೊಳ್ಳಲು ಅನುಕೂಲ ಮಾಡಿಕೊಟ್ಟಿದೆ. ಆಧುನಿಕ ಜಗತ್ತಿಗೆ ಮುಖಾಮುಖಿಯಾಗುತ್ತಾ ಅವರ ಬದುಕಿನಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಧಾರ್ಮಿಕವಾಗಿ ಹೇಗೆ ಸ್ಥಿತ್ಯಂತರಗಳನ್ನು ಕಾಣುತ್ತಿದ್ದಾರೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ವರ್ತಮಾನ ಕಾಲದಲ್ಲಿ ಕಮ್ಮಾರರ ಸ್ಥಿತಿಗತಿಗಳು ಹೇಗಿವೆ. ಆಧುನಿಕತೆ ಮತ್ತು ನಿತ್ಯಪರಿವರ್ತನಾಶೀಲವಾದ ಸಮಾಜದಲ್ಲಿ ವರ್ತಮಾನದಲ್ಲಿ ತನ್ನ ಅಸ್ತಿತ್ವ ಕಂಡುಕೊಳ್ಳಲು ಯಾವ ಯಾವ ಸವಾಲುಗಳನ್ನು ಎದುರಿಸಬೇಕಾಗಿದೆ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಸಮುದಾಯಗಳು ಹಂತ ಹಂತವಾಗಿ ತಮ್ಮ ಮೂಲ ವೃತ್ತಿಯನ್ನು ಕೈ ಬಿಡುತ್ತವೆ. ಇವರ ಜೀವನ ಶೈಲಿಯ ಮೇಲೆ ಯಾವ ಬದಲಾವಣೆಗಳಾಗಿವೆ. ಯುವ ಪೀಳಿಗೆಯು ತನ್ನ ಮೂಲ ವೃತ್ತಿಯಿಂದ ಹೇಗೆ ದೂರ ಸರಿಯುತ್ತಿದೆ ಎಂಬುದನ್ನು ವ್ಯಕ್ತಪಡಿಸಲಾಗಿದೆ.

**ಅಧ್ಯಯನದ ಉದ್ದೇಶ**

ಉಡುಪಿ, ಮಂಗಳೂರು ಮತ್ತು ಕೊಳ್ಳೆಗಾಲ ತಾಲೂಕಿನ ಕಮ್ಮಾರರನ್ನು ಕುರಿತು ಸಮಗ್ರವಾದ ಅಧ್ಯಯನವೇ ನಡೆದಿಲ್ಲವೆಂದೇ ಹೇಳಬಹುದು. ಆಧುನಿಕ ಯಂತ್ರಗಳ ಹಾವಳಿಯಲ್ಲಿ ಕಮ್ಮಾರಿಕೆ ವೃತ್ತಿಯಿಂದ ಹಂತ ಹಂತವಾಗಿ ವಿಮುಖರಾಗುತ್ತಿರುವುದನ್ನು ಕಾಣುತ್ತೇವೆ. ಈ ಸಮುದಾಯವು ಆರ್ಥಿಕವಾಗಿ ಕುಗ್ಗುತ್ತಾ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದೆ. ಒಂದು ಹಂತದಲ್ಲಿ ಉತ್ಪಾದನೆ ಮತ್ತು ಆರ್ಥಿಕತೆಯಲ್ಲಿ ಅತ್ಯಂತ ಪ್ರಬಲವಾಗಿದ್ದು ಈ ಸಮುದಾಯವು ಇಂದು ತನ್ನೆಲ್ಲ ಬದುಕನ್ನು ಕಳೆದುಕೊಳ್ಳುತ್ತಿದೆ. ಆರ್ಥಿಕವಾಗಿ ಕ್ಷೀಣಿಸುತ್ತಾ ಹೋದಂತೆ ಮತ್ತು ಆಧುನೀಕತೆಗೆ ತೆಕ್ಕೆ ಬಿದ್ದಾಂತೆ ಅದು ಅವರ ಪಾರಂಪರಿಕ ಸಂಸ್ಕೃತಿ, ಆಚಾರ – ವಿಚಾರ, ಪಾರಂಪರಿಕ ಜ್ಞಾನ, ವೃತ್ತಿ, ಉಡುಗೆ–ತೊಡುಗೆ, ಆಚರಣೆ, ಆರಾಧನೆ ಮುಂತಾದವುಗಳ ಮೇಲೆ ಅನೇಕ ಪ್ರಭಾವಗಳನ್ನು

ಬೀರಿದೆ. ಕಮ್ಮಾರರ ಬದುಕಿನ ಮೇಲಾದ ಪರಿಣಾಮಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಕೈಗೊಳ್ಳಲಾಗಿದೆ.

**ವ್ಯಾಪ್ತಿ**

ಕರ್ನಾಟಕದ ಮಂಗಳೂರು, ಉಡುಪಿ ಹಾಗೂ ಚಾಮರಾಜ ನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿಯ ಪ್ರತಿಯೊಂದು ಗ್ರಾಮದಲ್ಲಿ ಸಾಮಾನ್ಯವಾಗಿ ಕಂಡು ಬಿರುವ ಕಮ್ಮಾರ ಕುಟುಂಬಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನಗಳು**

ಈ ಅಧ್ಯಯನಕ್ಕೆ ವಿಸ್ತೃತವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಈ ಪ್ರಶ್ನಾವಳಿಯನ್ನು ಕ್ಷೇತ್ರಕಾರ್ಯದಲ್ಲಿ ಬಳಸಿಕೊಳ್ಳಲಾಗಿದೆ. ಸಮರ್ಪಕ ಮಾಹಿತಿದಾರರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಅದಲ್ಲದೆ ಅನ್ಯ ಸಮುದಾಯದ ಮಾಹಿತಿದಾರರಿಂದಲೂ ಮಾಹಿತಿ ಪಡೆಯಲಾಗಿದೆ. ವೈಜ್ಞಾನಿಕ ಅಧ್ಯಯನಕ್ಕಾಗಿ ಆಡಿಯೋ, ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ತೆಗೆಯಲಾಗಿದೆ. ಒಂದು ಕ್ರಮಬದ್ಧವಾದ ಅಧ್ಯಯನ ಶಿಸ್ತಿಗೆ ಒಳಪಟ್ಟು ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಇಲ್ಲಿಯವರೆಗೆ ನಡೆದು ಅಧ್ಯಯನಗಳ ಸಮೀಕ್ಷೆ**

ಕಮ್ಮಾರ ಮತ್ತು ವಿಶ್ವಕರ್ಮರನ್ನು ಕುರಿತಾದ ಅಧ್ಯಯನಗಳು ಕಡಿಮೆ ಪ್ರಮಾಣದಲ್ಲಿ ನಡೆದಿವೆ. ಕೆಲ ಸಮಾಜಶಾಸ್ತ್ರ ಅಧ್ಯಯನಕಾರರು ವಿಶ್ವಕರ್ಮದ ವೃತ್ತಿರ್ಗಾ ಬಗೆಗೆ ವಿವರಿಸಲು ಪ್ರಯತ್ನಿಸಿದ್ದಾರೆ.

1. Jan Brower, The makers of the world

ಹಾಲೆಂಡ್ ದೇಶದ ಮಾನವಶಾಸ್ತ್ರಜ್ಞ ಜಾನ್ ಬ್ರೋವರ್ ಎಂಬ ವಿದ್ವಾಂಸ ದಕ್ಷಿಣಭಾರತದಲ್ಲಿಯ ವಿಶ್ವಕರ್ಮರ ಐದು ವೃತ್ತಿಗಳಾದ ಕಮ್ಮಾರ, ಬಡಿಗ, ಕಂಚುಗಾರ ಶಿಲಾಶಿಲ್ಪ ಹಾಗೂ ಸುವರ್ಣ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. 1985ರಲ್ಲಿ ಕ್ಷೇತ್ರಕಾರ್ಯ ಪ್ರಾರಂಭಿಸಿ ಸುಮಾರು 10 ವರ್ಷಗಳವರೆಗೆ ಅಧ್ಯಯನ ಮಾಡಿ ವೃತ್ತಿಗಳು, ಇದಕ್ಕೆ ಸಂಬಂಧಿಸಿದ ಆಚಾರ ವಿಚಾರ ಮತ್ತು ಸಂಪ್ರದಾಯಗಳನ್ನು ವಿವರಿಸಿದ್ದಾರೆ. ಜಾನ್‌ಬ್ರೋವರ್ ತಮ್ಮ ಗ್ರಂಥದಲ್ಲಿ ಕಮ್ಮಾರಿಕೆ ಕುರಿತ ವಿವರಗಳನ್ನು ನೀಡಿದ್ದಾರೆ. (ಪುಟ ಸಂಖ್ಯೆ 55 ರಿಂದ 70ರ ವರೆಗೆ)

**ಕಬ್ಬಿಣ ತಯಾರಿಸುವುದು**

ಇವರು ಅಭಿಪ್ರಾಯ ಪಡುವಂತೆ ಕಮ್ಮಾರರು ಕಬ್ಬಿಣ ಎನ್ನುವ ಪದವನ್ನು ಬಳಸುತ್ತಾರೆ. ಇದರ ಆಂಗ್ಲಪದ ಖಡಿಠಿ. ಇದನ್ನು ಕರ್ಬುನ್, ಕಬ್, ಗಿರಿಜಾ ಎಂದು ಕರೆಯುತ್ತಾರೆ. ಇದರ ಶಬ್ದಾರ್ಥ ಬೆಟ್ಟುಗುಡ್ಡಗಳಲ್ಲಿ ಹುಟ್ಟಿದವನು ಎಂದೂ ವಿಶ್ವಕರ್ಮದ ಪ್ರಕಾರ ಕಬ್ಬಿಣದ ಅದಿರು ಎಂದರೆ ಮಹಾಕಾಳಿಯ ಪ್ರತಿರೂಪ, ಕಬ್ಬಿಣವು ಒಂದು ಕಚ್ಚಾವಸ್ತು ಇದರ ಪ್ರತಿರೂಪವೇ 'ಕಾಳಿದೇವತೆ' ಕಮ್ಮಾರರು ಈ ದೇವತೆಯನ್ನು ಸದಾ ಆರಾಧಿಸುತ್ತಾ ಜೀವನ ಸಾಗಿಸುತ್ತಿದ್ದರು ಎಂದಿದ್ದಾರೆ.

ಕಮ್ಮಾರರಿಗೆ ಕಬ್ಬಿಣದ ಅದಿರಿನ ಜ್ಞಾನ ಮತ್ತು ಪರಿಚಯವು ತಮ್ಮ ಪೂರ್ವಿಕರಿಂದ ತಿಳಿದಿರುತ್ತದೆ. ಇವರು ಕಬ್ಬಿಣದ ಅದಿರನ್ನೂ ಅದಿರುಕಲ್ಲು ಎನ್ನುತ್ತಾರೆ. ಇದು ಒಂದು ರೀತಿಯ ಮಣ್ಣು ಮತ್ತು ಮರಳು ಮಿಶ್ರವಾಗಿರುವಂತಹ ಕಲ್ಲು. ಈ ಅದಿರನ್ನು ಗುಡ್ಡ ಬೆಟ್ಟಗಳಿಂದ ಶೇಖರಿಸಿ ತಂದು ಪುಡಿ ಮಾಡಿ ನೀರಿನಿಂದ ಶೋಧಿಸಲಾಗುತ್ತದೆ. ನಂತರ ಉರಿಯುವ ಬೆಂಕಿಗೆ ಹಾರಿ ಆ ಮೂಲಕ ಕಬ್ಬಿಣವನ್ನು ಶೋಧಿಸುತ್ತಾರೆ.

**ಅ) ಆಯುಧಗಳು**

ಇವರು ತಯಾರಿಸುವ ಆಯುಧಗಳಲ್ಲಿ ಖಡ್ಗಳು ತುಂಬಾ ಪ್ರಸಿದ್ಧವಾದವುಗಳು ಕೆಲವಾರು ಖಡ್ಗಗಳನ್ನು ಇವರು ಸಂಪೂರ್ಣವಾಗಿ ಕಬ್ಬಿಣದಿಂದಲೇ ತಯಾರಿಸುತ್ತಿದ್ದರು. ಇನ್ನೂ ಕೆಲವು ಖಡ್ಗಗಳಿಗೆ ಮರದಿಂದ ಹಿಡಿಗಳನ್ನು ಜೋಡಿಸಿ ತಯಾರಿಸುತ್ತಿದ್ದರು. ಈ ಖಡ್ಗಗಳು ಇಂದೂ ಕೂಡ ದೇವರ ಆಯುಧಗಳಾಗಿವೆ. ಇದು ದುಷ್ಟ ಸಂಹಾರದ ಪ್ರತಿರೂಪಗಳು. ಈ ರೀತಿಯ ಖಡ್ಗಗಳ ತಯಾರಿಕೆಯಲ್ಲಿ ಕಮ್ಮಾರರು ಸಿದ್ಧ ಹಸ್ತರು.

**ಆ) ಎತ್ತಿಗೆ ಬಂಡಿಗೆ ಬೇಕಾಗುವಂತಹ ವಸ್ತುಗಳು**

ಮಾನವನು ನಾಗರಿಕತೆಯನ್ನು ಹೊಂದಲು ಬಹಳ ಮುಖ್ಯವಾಗಿ ಇರುವ ಆಧಾರ ಸ್ತಂಭಗಳು ಎಂದರೆ ಚಕ್ರಗಳು. ಈ ಚಕ್ರಗಳು ಆವಿಷ್ಕಾರವಾದೊಡನೆ ನಾಗರಿಕತೆಯು ತನ್ನ ವಿರಾಟ್ ರೂಪವನ್ನು ತೋರಿಸಲು ಪ್ರಾರಂಭಿಸಿತು ಎನ್ನಬಹುದು.

ಎತ್ತಿನ ಬಂಡಿಗೆ ಸಂಬಂಧಿಸಿದ ಚಕ್ರ, ಪಟ್ಟಿ, ಕೀಲು, ಗುಮ್ಮದ ಕಟ್ಟು, ಬಳೆ, ದೂರಿ, ಭೀಮ ಮೊಳೆ, ಮೊಳೆ, ಚೌಕದ ಕಟ್ಟು ಇನ್ನೂ ಮುಂತಾದವುಗಳನ್ನು ಕಮ್ಮಾರರು ಮಾಡಿಕೊಡುತ್ತಾರೆ.

2. Anantha Krishna Iyer ಅವರು ತಮ್ಮ The Mysore Tribes and castes (Volume 5) ಎಂಬ ಗ್ರಂಥದಲ್ಲಿ ವಿಶ್ವಕರ್ಮರನ್ನೂ ಕುರಿತು ಉಲ್ಲೇಖಿಸಿದ್ದಾರೆ. ವಿಶ್ವಕರ್ಮರ ವೃತ್ತಿಗಳನ್ನು ಕುರಿತು ವಿವರಣೆ ನೀಡಿದ್ದಾರೆ. ವಿಶ್ವಕರ್ಮರಲ್ಲಿ ಉಪಜಾತಿಗಳಿವೆ. ಅವರು ತಮ್ಮ ಪಂಗಡಕ್ಕೆ ಮೀಸಲಾದ ವೃತ್ತಿಯ ಜೊತೆಗೆ ಇತರೆ ಪಂಗಡದವರು ನಿರ್ವಹಿಸುತ್ತಿರುವ ವೃತ್ತಿಗಳನ್ನು ಇವರು ನಿರ್ವಹಿಸುತಾರೆ. ಮತ್ತು ವಿಶ್ವಕರ್ಮರು ನಾವು ಬ್ರಾಹ್ಮಣರಿಗಿಂತಲೂ ಹೆಚ್ಚಿನ ಸ್ಥಾನಮಾನಗಳನ್ನು ಉಳ್ಳವರು ಎಂದು ತಿಳಿಸುತ್ತಾ ನಾವು ಸಾವು ಇರದ ಬ್ರಹ್ಮನಿಂದ ನೇರವಾಗಿ ಸೃಷ್ಟಿಗೊಂಡವರು, ಆದರೆ ಬ್ರಾಹ್ಮಣರು ಸಾವಿಗೀಡಾದ ಋಷಿಗಳ ವಂಶದಿಂದ ಬಂದವರು ಆದ್ದರಿಂದ ನಾವು ಬ್ರಾಹ್ಮಣರಿಗಿಂತ ಹೆಚ್ಚಿನ ಮಾನ್ಯತೆಯನ್ನು ಪಡೆದುಕೊಂಡವರು ಎಂದು ಹೇಳಿದ್ದಾರೆ ಎಂದು ಋಥಿಜಡಿ ತಮ್ಮ ಗ್ರಂಥದ 4ನೇ ಸಂಪುಟದ 435ನೇ ಪುಟದಲ್ಲಿ ಹೇಳಿದ್ದಾರೆ.
3. Anand J. Koomaraswamy ಅವರ Arts and crafts of India ಎಂಬ ಪುಸ್ತಕದಲ್ಲಿ ವಿಶ್ವಕರ್ಮರ ವೃತ್ತಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಿದ್ದಾರೆ. ಇವರ ಅಭಿಪ್ರಾಯದ ಪ್ರಕಾರ ದಕ್ಷಿಣ ಏಷಿಯಾಕ್ಕೆ ಸಂಬಂಧಿಸಿದಂತೆ ಪಾಂಚಾಲರನ್ನು (Smitḥ) ಕುರಿತಾದ ಮಾಹಿತಿಯನ್ನು ನೀಡುವ ಪುಸ್ತಕ ನಾಕ್ಸ್ (ಏಟಿಠಥ) ರವರ ಊೂಣಾಠಡುಟಿಛಿಟ Relation of the Land Seylon ಎಂಬ ಈ ಕೃತಿಯಲ್ಲಿ 19ನೇ ಶತಮಾನದಲ್ಲಿ ಸಿಲೋನಿನಲ್ಲಿ ವಾಸಿಸುತ್ತಿದ್ದ ಕಮ್ಮಾರ, ಬಡಿಗ ಹಾಗೂ ಅಕ್ಕ ಸಾಲಿಗರ ಸಾಮಾಜಿಕ, ಆರ್ಥಿಕ ಜೀವನದ ಕ್ರಮಗಳು ಹೇಗಿದ್ದಾವೂ ಎಂಬ ಮಾಹಿತಿಯನ್ನು ದಾಖಲಿಸಲಾಗಿದೆ ಎಂದು ಕುಮಾರಸ್ವಾಮಿಯವರು ತಿಳಿಸುತ್ತಾರೆ.
4. Edgar Thurston ರವರ caste and tribes of south India ಎಂಬ ಕೃತಿಗಳ ಸಂಪುಟಗಳಲ್ಲಿ ವಿಶ್ವಕರ್ಮರ ಬಗ್ಗೆ ಉಲ್ಲೇಖಿಸಿದ್ದಾರೆ. ಪಾಂಚಾಳ ಅಥವಾ ಕಮ್ಮಲಸ ಎಂಬ ಐದು ವರ್ಗದ ವೃತ್ತಿಮೂಲ ಸಮುದಾಯಗಳನ್ನು ವಿಶ್ವಕರ್ಮರೆಂದು ಕರೆಯುತ್ತಾರೆ. ವಿಶ್ವಬ್ರಹ್ಮ, ವಿಶ್ವಕರ್ಮ ಈ ಪದಗಳು "ಕಮ್ಮಾಲನ" ಪದಕ್ಕೆ ಸಮಾನ ಪದಗಳೆಂದು ಹೇಳುತ್ತಾ ಕಮ್ಮಲಾನರೆಂದರೆ ಶಿಲ್ಪಿಗಳ ದೈವವಾದ ವಿಶ್ವಕರ್ಮನ ಐದು

ಮುಖಗಳಿಂದ ಹುಟ್ಟಿದ ಐದು ವರ್ಗ ಎಂದು ತಿಳಿಸಿದ್ದಾರೆ.

5. ರಾಜಶೇಖರ ಬಡಿಗೇರ, "ಅವರ ಸತ್ಯಾನ್ವೇಷಣೆ" ಎಂಬ ಗ್ರಂಥದಲ್ಲಿ ಒಟ್ಟು 18 ಲೇಖನಗಳಿದ್ದು ಇದರಲ್ಲಿ "ಕಮ್ಮೆಕುಲ ಮತ್ತು ಬಸವಣ್ಣ ವಾಜವಂಶ ಮತ್ತು ಕನ್ನಡ ಸಾಹಿತ್ಯ, ಕಮ್ಮೆಕುಲ ಒಂದು ವಿಶ್ಲೇಷಣೆ" ಎಂಬ ಲೇಖನ ಪ್ರಮುಖವಾಗಿದೆ. ವಿಶ್ವಕರ್ಮರು ಮತ್ತು ಅವರ ವೃತ್ತಿಗಳಿಗೆ ಸಂಬಂಧಿಸಿದ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತದೆ.
6. ಡಾ॥ ಆರ್.ಬಿ. ಕುಮಾರ್ ಅವರ "ಮುದ್ದೆ ಕಂಬಾರರು" ಎಂಬ ಗ್ರಂಥ ಉತ್ತರ ಕರ್ನಾಟಕದಲ್ಲಿ ವಾಸಿಸುತ್ತಿರುವ ಮುದ್ದೆ ಕಂಬಾರರ ಸಂಪೂರ್ಣ ವಿವರಗಳನ್ನೊಳಗೊಂಡ ಮಾಹಿತಿಯನ್ನು ನೀಡುತ್ತದೆ.
7. ಡಾ॥ ಗಂಗಾಧರ ದೈವಜ್ಞ ಅವರು "ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ" ಎಂಬ ಗ್ರಂಥದಲ್ಲಿ ಶಿರಸಂಗಿ ಕಾಳಮ್ಮನನ್ನು ವಿಶ್ವಕರ್ಮರು ತಮ್ಮ ಕುಲದೈವವಾಗಿ ಪಡೆಯಲಿಕ್ಕೆ ಕಾರಣಗಳೇನು, ವಿಶ್ವಕರ್ಮರು ಭಾರತೀಯ ಸಂಸ್ಕೃತಿಗೆ ನೀಡಿದ ಕೊಡುಗೆ ಕುರಿತು ವಿಶ್ಲೇಷಣೆ ಮಾಡಿದ್ದಾರೆ.
8. ಡಾ॥ ವಾಸುದೇವ ಬಡಿಗೇರ ಅವರು "ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ (ಚಾರಿತ್ರಿಕ ಅಧ್ಯಯನ) ಎಂಬ ಗ್ರಂಥದಲ್ಲಿ ಶಿರಸಂಗಿಯ ಪ್ರಾಚೀನತೆ, ಕಾಳಮ್ಮ ಈ ಪ್ರದೇಶದಲ್ಲಿ ನೆಲೆಗೊಳ್ಳಲು ಕಾರಣಗಳು ಈ ಪ್ರದೇಶದಲ್ಲಿರುವಂತಹ ಆದಿ ಮಾನವನ ನೆಲೆಗಳು, ಕಬ್ಬಿಣ ತಯಾರಿಕೆ ಇನ್ನೂ ಮುಂತಾದವುಗಳ ಬಗ್ಗೆ ವಿವರಗಳನ್ನು ನೀಡುತ್ತಾರೆ.
9. ಡಾ॥ ವಾಸುದೇವ ಬಡಿಗೇರ ಅವರ "ಸಂಡೂರು ಪರಿಸರದ ಕಾರ್ತಿಕೇಯ ತಪೋವನ" ಎಂಬ ಗ್ರಂಥದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ ಆದಿ ಮಾನವನ ನೆಲೆಗಳು, ಕಬ್ಬಿಣ ತಯಾರಿಕೆ ಸಂಬಂಧಿಸಿದ ಕುರುಹುಗಳು ಮತ್ತು ಕಾರ್ತಿಕೇಯ ತಪೋವನದ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಿದ್ದಾರೆ.

**ಪದನಿಷ್ಪತ್ತಿ**

ಕಮ್ಮಾರ ಎಂಬ ಪದವು ಕಬ್ಬಿಣ ಕೆಲಸವನ್ನು ನಿರ್ವಹಿಸುವವನು ಎಂಬ ಅರ್ಥ ನೀಡುತ್ತದೆ. ಕರಿದು–ಪೊನ್–ಕರ್ಬೊನ್ ಎಂಬ ಪದವು ತುಳುಭಾಷೆಯಲ್ಲಿ ಕರ್ಬ ಆಗಿ ಉಳಿದಿದೆ. ಕನ್ನಡದಲ್ಲಿ ಕಬ್ಬಿಣ ಎಂದು ಕರೆಯುತ್ತಾರೆ. ಇತಿಹಾಸಕಾರರ ಪ್ರಕಾರ ಕಬ್ಬಿಣವು ಇತರೆ ಲೋಹಗಳ ನಂತರ ಕಂಉಡ ಹಿಡಿಯಲ್ಪಟ್ಟ ಲೋಹ. ಚರಿತ್ರೆಕಾರರು ಕಬ್ಬಿಣದ ಯುಗವನ್ನು ಕ್ರಿ.ಪೂ. 2000 ದಿಂದ ಪ್ರಾರಂಭವಾಯಿತು. ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಕಬ್ಬಿಣವು ಕ್ರಿ.ಪೂ. 1000 ಹೊತ್ತಿಗೆ ಗ್ರೀಸ್ ದೇಶವನ್ನು ಪ್ರವೇಶಿಸಿತು ಎನ್ನುತ್ತಾರೆ. ವೇದಗಳಲ್ಲಿ ಕಮ್ಮಾರರು ವಿವಿಧ ಬಾಣಗಳನ್ನು ಹಾಗೂ ಅವುಗಳ ತುದಿಗೆ ಕಬ್ಬಿಣದ ಅಲಗು ಜೋಡಿಸಿ ತಯಾರಿಸುತ್ತಿದ್ದರು.

ಕಮ್ಮಾರ ಎಂದರೆ ವೇದ ಸಂಹಿತೆಗಳ ಪ್ರಕಾರ ಶಿಲ್ಪಿ. ಈ ಅರ್ಥವನ್ನು ಸೂಚಿಸುವಂತೆ ಈ ಶಬ್ದವು ವೇದಗಳಲ್ಲಿ ಅನೇಕ ಬಾರಿ ಬಳಕೆಯಾಗಿದೆ. ವೇದಗಳಲ್ಲಿ ಶಿಲ್ಪಿಗಳನ್ನು ದಿವಾನಿಃ, ರಥಕಾರಃ ಎಂದು ಇವರೊಂದಿಗೆ ಉಲ್ಲೇಖಿಸಿ ಇವರನ್ನೆಲ್ಲಾ ಮನೀಷಿಣಾ ಎಂದು ವರ್ಣಿಸಿದೆ. ಕರ್ಮಾರ (ಲೋಹಕಾರ) ಇವರು ಗ್ರಾಮದ ಮುಖ್ಯಸ್ಥರು ಮತ್ತು ಸೂತರು ಎಲ್ಲರೂ ಸೇರಿ ರಾಜ್ಯವನ್ನೂ ರಾಜರನ್ನೂ ರೂಪಿಸುವವರಾಗಿದ್ದಾರೆ ಎಂದು ಹೇಳಿದೆ. ರಾಜಕೃತಃ ಶಬ್ದಕ್ಕೆ ರಾಜನನ್ನು ನಿರ್ಮಾಣ ಮಾಡುವವರು (ಏಟಿರ ಟಚಿಇಜಡಿ) ಹೀಗೆಯೇ ಕರ್ಮಾರನು ಬೆಂಕಿಯಿಂದ ಖನಿಜವನ್ನು ಕರಗಿಸುತ್ತಿದ್ದುದರಿಂದ ಇವನನ್ನು "ಧಮಾತೃ" ಎಂದು ಸಂಭೋದಿಸಿದೆ, ಬೆಂಕಿಯ ಮೇಲೆ ಇರಿಸಲು ಸಾಧ್ಯವಾಗುವಂತಹ ಪಾತ್ರೆ (ಘರ್ಮಆಯಸಮಯ) ತಯಾರಿಸುತ್ತಿದ್ದರು. ಯಜ್ಞದಲ್ಲಿ ಸೋಮಪಾನಕ್ಕಾಗಿ ಬಳಸುವ ಮರದ ಪಾತ್ರೆಯಾದ 'ಚಮಸ'ವನ್ನೂ ಕೂಡ ಆಗಾಗ ಇವರು ಸುತ್ತಿಗೆಯಿಂದ ಬಡಿದು ಕಬ್ಬಿಣದಲ್ಲಿ (ಆಯೋಹತ) ತಯಾರಿಸುತ್ತಿದ್ದರು.

ಪಾಳಿ ಭಾಷೆಯಲ್ಲಿ ಕಮ್ಮಾರ ಶಬ್ದವನ್ನು ಲೋಹಗಾರ ಎಂಬ ಅರ್ಥದಲ್ಲಿ ಕಬ್ಬಿಣ, ಬೆಳ್ಳಿ, ಬಂಗಾರ ಇತ್ಯಾದಿ ಲೋಹಗಳಲ್ಲಿ ಕೆಲಸ ಮಾಡುವವರು ಎಂದು ಬಳಸಲಾಗಿದೆ. ಇವರು ಸಾಮಾಜಿಕವಾಗಿ ಬಹು ಪ್ರಯೋಜನಕಾರಿಗಳಾದುದರಿಂದ ಜನರು ಮತ್ತು ರಾಜ ಇಬ್ಬರು ಇವರಿಗೆ ಗೌರವ ಕೊಡುತ್ತಿದ್ದರು.

ತಮಿಳಿನಲ್ಲಿ ಕಮ್ಮಾಲನ್ ಎಂಬ ಪದವನ್ನೂ ಶಿಲ್ಪಿ ಅಥವಾ ತಂತ್ರಜ್ಞ ಎಂಬ ಅರ್ಥದಲ್ಲಿ ಬಳಸುತ್ತಾರೆ. ಇದು ಕುಲವಾಚಕವಾಗಿದ್ದು ತಟ್ಟಾನ್ (ಸ್ವರ್ಣಶಿಲ್ಪಿ) ಕನ್ನಾನ್ (ಕಂಬಿನ ಶಿಲ್ಪಿ) ತಚ್ಚನ್ (ಕಾಷ್ಠಶಿಲ್ಪಿ) ಸಿರ್ಪನ್ (ಶಿಲಾಶಿಲ್ಪಿ) ಕೊಲ್ಲನ್ ಅಥವಾ ಕರುಮಾನ್ (ಕಬ್ಬಿಣದ ಶಿಲ್ಪಿ) ಎಂಬ ಪಂಚಶಿಲ್ಪಿಗಳು ಗುಂಪಿಗೆ ಸಾಮಾನ್ಯ ಪಂಚಕಾರಂಕೀ ಅರ್ಥವನ್ನು ಅನುಸರಿಸಿದ್ದು.

ವಿಜ್ಞಾನೇಶ್ವರನು ಯಜ್ಞವಲ್ಕ್ಯ ಸೂತ್ರಕ್ಕೆ ಭಾಷ್ಯವನ್ನು ಬರೆಯುತ್ತಾ ಕರ್ಮಾರ ಎಂದರೆ ಲೋಹಕಾರ ಮತ್ತು ತಕ್ಷಕ (ಬಡಗಿ) ಎಂದು ಹೇಳಿದ್ದಾನೆ.

ಕಬ್ಬಿಣದಿಂದಲೇ ಸೃಷ್ಟಿ ಎನ್ನುತ್ತಾರೆ. ಶಿಶುವು ತಾಯಿಯ ಗರ್ಭದಿಂದ ಹೊರ ಬಂದ ಕೂಡಲೆ ನಾಭೀನಾಳವನ್ನು ಕತ್ತರಿಸಿದಾಗ ಮಗುವಿನ ಹುಟ್ಟು ಆಗುತ್ತದೆ. ತಾಯಿಯಿಂದ ಮಗುವನ್ನು ಬೇರ್ಪಡಿಸುವ ಸಾಧನ ಕತ್ತಿ ಆದುದರಿಂದಲೇ ಕಬ್ಬಿಣದಿಂದ ಸೃಷ್ಟಿ ಎಂಬ ಮಾತಿಗೆ ತುಂಬಾ ಅರ್ಥವಿದೆ.

ಕಬ್ಬಿಣವೇ ವ್ಯವಸಾಯಕ್ಕೆ ಮೂಲ, ಉಳುಮೆ ಮಾಡಬೇಕಾದರೆ ನೇಗಿಲುಬೇಕು. ಈ ನೇಗಿಲದ ಮೊನೆಗೆ ಕಬ್ಬಿಣದಿಂದ ಮಾಡಿದ ಕುಳ (ಮೊನೆ) ಬೇಕು. ಈ ಕುಳದಿಂದ ಮಣ್ಣು ಸೀಳಾಗಿ ಭೂಮಿ ಹದವಾಗಿ ವ್ಯವಸಾಯಕ್ಕೆ ಅಣಿಯಾಗುತ್ತದೆ. ಅದೇ ರೀತಿ ಹತ್ತಿಯಿಂದ ನೂಲು ತೆಗೆಯಬೇಕಾದರೆ ತಕಲಿ (ಕದಿರು) ಬೇಕು. ಇದು ಕಬ್ಬಿಣದಿಂದ ತಯಾರಿಸಿದ್ದು ಇದರಿಂದ ಬಟ್ಟೆಯನ್ನು ಸಿದ್ಧಪಡಿಸಲು ಸಾಧ್ಯ.

ಕಬ್ಬಿಣವೇ ಬರವಣಿಗೆಗೆ ಮೂಲ. ಒಲೇ ಗರಿಯಲ್ಲಿ ಬರೆಯಲು ಕಬ್ಬಿಣದ ಕಂಟೀಬೇಕು. ಮಸಿಯಲ್ಲಿ ಬರೆಯಲು ಕಬ್ಬಿಣದ ಮೊನೆ (ನಿಬ್) ಬೇಕು. ವ್ಯಾಪಾರಕ್ಕೆ ತಕ್ಕಡಿ ನಿರ್ಮಾಣಕ್ಕೆ ಕಬ್ಬಿಣಬೇಕು. ಹೀಗೆ ಕಬ್ಬಿಣದಿಂದಲೆ ನಾಗರಿಕತೆಯ ಆರಂಭ ಮತ್ತು ಬೆಳವಣಿಗೆ ಎಂದು ಧೈರ್ಯದಿಂದ ಹೇಳಬಹುದು. ಕರ್ಮಾರ ಎಂಬ ಪದವು ವೇದ ಕಾಲದಲ್ಲಿ ಲೋಕ ಶಿಲ್ಪಿಗಳಾಗಿದ್ದು ಮತ್ಸ್ಯ ಪುರಾಣದಲ್ಲಿ ಕಾತ್ಯಾಯನ ಸೂತ್ರಗಳಲ್ಲಿ ಕರ್ಮಾರರು ಎಂದು ಉಲ್ಲೇಖಿತವಾಗಿದೆ. ಕಬ್ಬಿಣದ ಕೆಲಸಗಾರರು ಉಳಿದವರಿಗಿಂತ ಹೆಚ್ಚು ಶ್ರಮಜೀವಿಗಳಾದ ಕಾರಣ ಇವರನ್ನು ಕರ್ಮಕಾರರು ಎಂದು ಕರೆದಿರಬಹುದು.

ಪಾಂಚಾಲರು ಎಂಬುದು ಐದು ಸಮುದಾಯಗಳನ್ನು ಒಟ್ಟಿಗೆ ಸೇರಿಸಿ ಹೇಳುವ ಪದವಾಗಿದೆ. ಸಂಸ್ಕೃತದ ಎಂಬ ವೃತ್ತಿ ಸೂಚಕ ಪದಗಳು, ಮೆಲ್ನೋಟಕ್ಕೆ ಜಾತಿ ಸೂಚಕಗಳಂತೆ ಭಾಸವಾಗುತ್ತದೆ. ಆದರೆ ಈ ಜನಗಳ ಬದುಕಿನ ವಿವರ ವಿನ್ಯಾಸಗಳನ್ನು ಹಾಗೂ ಪರಂಪರೆಯನ್ನು ಅಧ್ಯಯನ ಮಾಡಿದರೆ ಈ ಐದು ವೃತ್ತಿಗಳು

ಒಂದೇ ಜಾತಿಯ ಜನ ನಿರ್ವಹಿಸುತ್ತಾರೆ ಎಂಬುದು ಗೋಚರಿಸುತ್ತದೆ. ಇವರಲ್ಲಿರುವ ಗೋತ್ರಗಳು ಈ ಕೆಳಗಿನಂತಿವೆ.

| | ದೈವ | ಮೂಲ ಪುರುಷ | ಗೋತ್ರ | ವೃತ್ತಿ |
|---|---|---|---|---|
| 1. | ರುದ್ರ | ಮನು | ಸಾನಗ | ಲೋಹ |
| 2. | ವಿಷ್ಣು | ಮಯ | ಸನಾತನ | ಕಾಷ್ಠ |
| 3. | ಬ್ರಹ್ಮ | ತ್ವಷ್ಟ | ಅಹಭೂನ | ಕಾಂಸ್ಯ, ಕಂಚು |
| 4. | ಇಂದ್ರ | ಶಿಲ್ಪಿ | ಪ್ರತ್ನ | ಶಿಲಾ |
| 5. | ಸೂರ್ಯ | ದೈವಜ್ಞ | ಸುಪರ್ನಾಸ್ವ | ಸ್ವರ್ಣ |

ಭಗವಾನ್ ವಿಶ್ವಕರ್ಮನ ಪ್ರಥಮ ಮುಖವಾದ ಸದ್ಯೋಜಾತ ಮುಖದಿಂದ ಉತ್ಪನ್ನವಾದ ಮನುವು ಶುಭಕರ್ಮಗಳ ಕಂಕಣದಿಂದ ಬ್ರಹ್ಮರ್ಷಿ ಎಂದು ಕರೆಯಲ್ಪಟ್ಟನು. ಆತನ ಗೋತ್ರವು ಸಾನಗ. ಉಪಗೋತ್ರಗಳು ಇಪ್ಪತ್ತೈದು, ಈತನು ತಿಳಿದ ಪ್ರಮುಖ ವೇದ ಋಗ್ವೇದ, ಉಪವೇದ ಆಯುರ್ವೇದ ಈತನು ಅಶ್ವಲಾಯನ ಸೂತ್ರವನ್ನು ಅಧ್ಯಯನ ಮಾಡಿ ಲೋಹ ಸಂಹಿತೆಯಲ್ಲಿ ಪ್ರವೀಣ ನೆನಿಸಿ ಕಬ್ಬಿಣ ಸಂಬಂಧಿ ಶಿಲ್ಪದಲ್ಲಿ ಪರಿಣಿತನಾದನು. ತ್ರಿಕೋನ ಕುಂಡದಲ್ಲಿ ಯಜ್ಞ ಮಾಡುತ್ತಾ ರುದ್ರನ ಉಪಾಸಕನಾಗಿ ಅಖಿಲ ಬ್ರಹ್ಮಾಂಡದ ನಿವಾಸಿಗಳಿಗೆ ಲೋಹ ಶಿಲ್ಪಗಳ ರಚನೆ ಮಾಡಿ ಸಮಾಜಕ್ಕೆ ಉಪಕಾರಿಯಾಗಿರುತ್ತಾನೆ.

ವಿಶ್ವಕರ್ಮನ ದ್ವಿತೀಯ ಮುಖವಾದ ವಾಮದೇವ ಮುಖದಿಂದ ಬ್ರಹ್ಮರ್ಷಿ ಮಯನು ಉತ್ಪನ್ನನಾದನು. ಆತನ ಗೋತ್ರ ಸನಾನತ, ಉಪಗೋತ್ರಗಳು ಇಪ್ಪತ್ತೈದು, ಈತನು ತಿಳಿದ ಪ್ರಮುಖ ವೇದ ಯಜುರ್ವೇದ, ಉಪವೇದ ಧನುರ್ವೇದ. ಈತನು ಅಪಸ್ತಂಭ ಸೂತ್ರ ಸಂಹಿತೆಯನ್ನು ಅಧ್ಯಯನ ಮಾಡಿ ಚೌಕಾಕಾರದ ಕುಂಡದಲ್ಲಿ ಯಜ್ಞ ಮಾಡುತ್ತಾ ಭಗವಾನ್ ವಿಷ್ಣುವಿನ ಉಪಾಸಕನಾಗಿ ಕಾಷ್ಠಶಿಲ್ಪದಲ್ಲಿ ಪಾರಂಗತನಾಗಿದ್ದನು.

ವಿಶ್ವಕರ್ಮನ ತೃತೀಯ ಆಘೋರ ಮುಖದಿಂದ ಬ್ರಹ್ಮರ್ಷಿ ತ್ವಷ್ಟು ಉತ್ಪನ್ನನಾದನು. ಈತನ ಗೋತ್ರ ಅಹಭೂನ, ಉಪಗೋತ್ರಗಳು ಇಪ್ಪತ್ತೈದು, ಈತನು ತಿಳಿದ ಪ್ರಮುಖ ವೇದ ಸಾಮವೇದ, ಉಪವೇದ ಗಾಂಧರ್ವವೇದ, ದ್ರಾಕ್ಷಾಯಾನ ಸೂತ್ರವನ್ನು ಅಧ್ಯಯನ ಮಾಡಿ ತಾಮ್ರ ಸಂಹಿತೆಯಲ್ಲಿ ಪರಿಣಿತನಾಗಿದ್ದನು. ಈತನು ಗೋಲಾಕಾರದ ಕುಂಡದಲ್ಲಿ ಯಜ್ಞ ಮಾಡುತ್ತಾ ಬ್ರಹ್ಮದೇವನ ಉಪಾಸಕನಾಗಿ ತಾಮ್ರಕ್ಕೆ ಸಂಬಂಧಿಸಿದ ವಸ್ತುಗಳ ನಿರ್ಮಾಣದಲ್ಲಿ ಅದ್ವಿತೀಯ ಪರಿಣಿತನಾಗಿದ್ದನು.

ವಿಶ್ವಕರ್ಮನ ಚತುರ್ಥ ತತ್ಪುರುಷ ಮುಖದಿಂದ ಬ್ರಹ್ಮರ್ಷಿ ಶಿಲ್ಪಿಯು ಉತ್ಪನ್ನನಾದನು. ಈತನ ಗೋತ್ರ ಪ್ರತ್ನ, ಉಪಗೋತ್ರಗಳು 25 ಈತನು ತಿಳಿದ ಪ್ರಮುಖವೇದ ಅಥರ್ವಣ ವೇದ, ಉಪವೇದ ಶಿಲ್ಪವೇದ, ಭೋಧಾಯನ ಸೂತ್ರವನ್ನು ಅಧ್ಯಯನ ಮಾಡಿ ಶಿಲ್ಪ ಸಂಹಿತೆಯಲ್ಲಿ ಪರಿಣಿತನಾದನು. ಷಟ್ಕೋಣ ಕುಂಡದಲ್ಲಿ ಯಜ್ಞ ಮಾಡುತ್ತಾ ಇಂದ್ರನ ಉಪಾಸಕನಾಗಿ ಶಿಲಾ ಶಿಲ್ಪದಲ್ಲಿ ಅದ್ಭುತ ಪ್ರಗತಿ ಸಾಧಿಸಿದನು. ಈತನ ವಂಶಜರು ಅನೇಕ ಪ್ರಕಾರದ ಶಿಲ್ಪಗಳಲ್ಲಿ ಪರಿಣಿತಿ ಹೊಂದಿದ್ದರಲ್ಲದೆ ದೇವಾಲಯ, ವಿಶಾಲಭವನ, ಜಲಾಶಯಗಳ ನಿರ್ಮಾಣದಲ್ಲಿ ಪ್ರವೀಣರಾಗಿದ್ದರು.

ವಿಶ್ವಕರ್ಮನ ಪಂಚಮ ಈಶಾನ ಮುಖದಿಂದ ಬ್ರಹ್ಮರ್ಷಿ ದೈವಜ್ಞನು ಉತ್ಪನ್ನನಾದನು. ಈತನ ಗೋತ್ರ ಸುಪರ್ಣಶ್ಯ, ಉಪಗೋತ್ರಗಳು 25 ಈತನು ತಿಳಿದ ವೇದ ಸೂಕ್ಷವೇದ (ಪ್ರಣವ ವೇದ) ಉಪವೇದಗಳಾಗಿ ಇತಿಹಾಸ, ಪುರಾಣ ಮೊದಲಾದವುಗಳನ್ನು ಅಭ್ಯಾಸ ಮಾಡಿದನು. ಋತ್ಯಾಯನ ಸೂತ್ರವನ್ನು ಅಧ್ಯಯನ ಮಾಡಿ ಸ್ವರ್ಣ ಶಿಲ್ಪದಲ್ಲಿ ಕುಶಲನಾಗಿದ್ದನು. ಅಷ್ಟ ಕೋಣ ಕುಂಡದಲ್ಲಿ ಯಜ್ಞ ಮಾಡುತ್ತಾ ಸೂರ್ಯ ಭಗವಾನ್‌ನನ್ನು ಆರಾಧಿಸುತ್ತಾ ಬಂಗಾರದ ವಸ್ತುಗಳ ನಿರ್ಮಾಣದಲ್ಲಿ ಪರಿಣಿತಿಯನ್ನು ಹೊಂದಿದ್ದಾನೆ. ಈ ಪ್ರಕಾರ ಐದು ಬ್ರಹ್ಮರ್ಷಿಗಳು ಕಬ್ಬಿಣ, ಮರ, ತಾಮ್ರ, ಶಿಲೆ, ಬಂಗಾರ ಇವುಗಳಲ್ಲಿ ಲೌಕಿಕ ವಸ್ತುಗಳನ್ನು ನಿರ್ಮಿಸಿ ಲೋಕ ವಿಖ್ಯಾತರಾದರು. ಇವರು ತಯಾರಿಸಿದ ವಸ್ತುಗಳು ಪ್ರಾಣಿ ಮತ್ತು ಮನುಷ್ಯರೆಲ್ಲರಿಗೂ ಉಪಯುಕ್ತವಾದವುಗಳು ಇವುಗಳ ಸಹಾಯದಿಂದ ಯಜ್ಞ, ಪೂಜೆ, ಉಪಾಸನೆ ಮಾಡುತ್ತಾ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಫಲಗಳನ್ನು ಪಡೆಯುವಲ್ಲಿ ಸಕಲರೂ ಸಫಲರಾಗುತ್ತಿದ್ದರು.

## ಕಮ್ಮಾರರ ಕುಲುಮೆಗಳ ರಚನೆ

ಎಡ್ಗರ್ ಥರ್ಸ್ಟನ್‌ರವರ ಪ್ರಕಾರ ಕಮ್ಮಾರರು ಪ್ರಾಚೀನ ಕಾಲದಿಂದಲೂ ಕಬ್ಬಿಣ ತಯಾರಿಸುವ ವೃತ್ತಿಯಲ್ಲಿ ತೊಡಗಿಕೊಂಡವರು, ಇವರ ಕಾರ್ಯಾಗಾರ ಕುಲುಮೆಗಳು ಸಾಮಾನ್ಯವಾಗಿ ಉತ್ತರ ದಿಕ್ಕಿನ ಕಡೆಗೆ ಮುಖ ಮಾಡಿಕೊಂಡಿರುತ್ತಿದ್ದುದನ್ನು ಕಾಣಬಹುದು ಎಂದಿದ್ದಾರೆ.

1. ಅಡಿಗಲ್ಲು
2. ತಿದಿ
3. ಕುಲುಮೆ
4. ಕೆಲಸ ಮಾಡುವ ಕಮ್ಮಾರ ಕುಳಿತುಕೊಳ್ಳುವ ಸ್ಥಳ
5. ನೀರಿನ ಬಾವಿ
6. ತಿದಿ ಎಳೆಯುವವನು
7. ಕಬ್ಬಿಣ ಬಡಿಯುವವನು
8. ದೇವರ ಫೋಟೋಗಳು, ಹೆಚ್ಚಾಗಿ ಕಾಳಿಕಾಂಬ ಮತ್ತು ವಿಶ್ವಕರ್ಮರ ಫೋಟೋಗಳು
9. ಅಗ್ಗಿಷ್ಟಿಕೆ

ಕಮ್ಮಾರರು ಪ್ರಾಚೀನ ಕಾಲದಿಂದಲೂ ತಿದಿಯನ್ನು ಉಪಯೋಗಿಸುತ್ತಿದ್ದರು. ಆದರೆ ಅದರ ಸ್ಥಾನದಲ್ಲಿ ಇಂದು ಆಧುನಿಕವಾದ ಬ್ಲೋವರ್‌ಗಳು ಬಂದಿವೆ. ಕೆಲವು ಕುಲುಮೆಗಳನ್ನು ನಾಲ್ಕು ಕಂಬ ಹಾಕಿ ಅದರ ಮೇಲೆ ತೆಂಗಿನ ಗರಿಗಳನ್ನು ಹಾಕಿ ಕುಲುಮೆ ತಯಾರಿಸುತ್ತಿದ್ದರು. ಆದರೆ ಇತ್ತೀಚೆಗೆ ಹುಲ್ಲು ಅಥವಾ ಹೆಂಚನ್ನು ಹೊದಿಸುತ್ತಾರೆ.

## ಆಹಾರ ಪದ್ಧತಿ

ಇವರ ಆಹಾರ ಪದ್ಧತಿ ಒಂದು ಕಾಲಕ್ಕೆ ವಿಶಿಷ್ಟವಾಗಿತ್ತು. ನೈಸರ್ಗಿಕವಾದ ಹಾಗೂ ಹೆಚ್ಚು ಪ್ರೋಟಿನ್ ಕೆಲೋರಿಸ್ ಇರುವ ಗೆಡ್ಡೆ ಗೆಣಸುಗಳನ್ನು ಬಳಸುತ್ತಿದ್ದರು. ಇವುಗಳು ದೇಹಕ್ಕೆ ಹೆಚ್ಚು ಶಕ್ತಿಯನ್ನು ಕೊಡುತ್ತಿದ್ದವು. ಶ್ರಮಜೀವಿಗಳಾದ ಇವರು ದಿನಕ್ಕೆ ನಾಲ್ಕು ಬಾರಿ ಆಹಾರ ಸೇವಿಸುತ್ತಾರೆ. ಇತ್ತೀಚೆಗೆ ಇವರಲ್ಲಿನ ಶಾರೀರಿಕ ಶಕ್ತಿ ಕುಂದುತ್ತಾ ಹಾಗೂ ರೋಗರುಜಿನಗಳ ದಾಸರಾಗುತ್ತಿದ್ದಾರೆ.

ಕರಾವಳಿ ಪ್ರದೇಶದ ಕಮ್ಮಾರರಿಗೆ ಕುಚಲಕ್ಕಿ ಪ್ರಮುಖ ಆಹಾರವಾಗಿದೆ. ಇವರು ಅಕ್ಕಿಯಿಂದಲೇ ಅನೇಕ ಪದಾರ್ಥಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಅದರಲ್ಲಿ ಅಕ್ಕಿ ಗಂಜಿ, ನೀರ ಗಂಜಿ, ಅನ್ನ, ಅಕ್ಕಿರೊಟ್ಟಿ, ದೋಸೆ, ಇಡ್ಲಿ, ಅಕ್ಕಿ ಕಡುಬು ಮುಂತಾದವುಗಳನ್ನು ತಯಾರಿಸುತ್ತಾರೆ. ಹಬ್ಬ ಹುಣ್ಣಿಮೆ, ಜಾತ್ರೆಗಳಲ್ಲಿ ಸಿಹಿ ಕಡುಬು ಮಾಡುತ್ತಾರೆ. ತರಕಾರಿಗಳನ್ನೆಲ್ಲಾ ಸೇರಿಸಿ ಸಾಂಬಾರು ತಯಾರಿಸುತ್ತಾರೆ. ಕೊಬ್ಬರಿ ಹಾಗೂ ಕೊಬ್ಬರಿ ಎಣ್ಣೆಯನ್ನು ಹೆಚ್ಚಾಗಿ ಬಳಸುತ್ತಾರೆ.

ನವರಾತ್ರಿ, ದೀಪಾವಳಿ, ಯುಗಾದಿ ಮುಂತಾದ ಸಂದರ್ಭಗಳಲ್ಲಿ

ವಿಶೇಷವಾಗಿ ಸಿಹಿ ಅಡುಗೆ ಮಾಡುತ್ತಾರೆ. ಋತುಮಾನಕ್ಕೆ ತಕ್ಕಂತೆ ಆಹಾರ ಸ್ವೀಕರಿಸುವ ಕ್ರಮ ಒಂದು ಕಾಲಕ್ಕಿತ್ತು. ಬೇಸಿಗೆಯಲ್ಲಿ ಲಿಂಬೆಹಣ್ಣಿನ ಪಾನಕ, ಬೀರುಂಡೆ ಪಾನಕ, ಕಲ್ಲಂಗಡಿ ಜ್ಯೂಸ್, ಮಜ್ಜಿಗೆ ಮುಂತಾದವುಗಳನ್ನು ಹೆಚ್ಚಾಗಿ ಬಳಸುತ್ತಾರೆ.

**ಕಮ್ಮಾರರು ತಯಾರಿಸುತ್ತಿದ್ದ ವಸ್ತುಗಳು**

**ಆಯುಧಗಳು:**

ಮಾನವ ಮೊದಲಿಗೆ ಕಬ್ಬಿಣ ಬಳಸಿಕೊಂಡದ್ದು ಆಯುಧ ನಿರ್ಮಾಣಕ್ಕಾಗಿ, ಆತ್ಮರಕ್ಷಣೆ ಮತ್ತು ಆಹಾರ ಸಂಪಾದನೆಗಾಗಿ, ಮಾನವನಿಗೆ ಆಯುಧಗಳು ಅನಿವಾರ್ಯವಾಗಿದ್ದುವು. ಕನ್ನಡ ಸಾಹಿತ್ಯದಲ್ಲಿ ಹಲವಾರು ವಿವಿಧ ಆಯುಧಗಳನ್ನು ಹೆಸರಿಸಿದ್ದಾರೆ. ಚಕ್ರ ಬೈಂಡಿವಾಳ್, ಬ್ರುಕುಂಡಿ, ದೃಘನ, ದಶಕಂಟಕ, ಮುಸಲ, ಮೌಷ್ಟಿಕ, ಮಯೂಖ ಲಗಂಡ, ಲವಿತ್ರ, ಗರಿಘ, ಪ್ರಾಸಪಾಶ, ಶಕ್ತಿ, ಶತಘ್ನಿ, ಸೀರ, ಸ್ಥೂನ, ತೋಮರ, ಗದೆ, ಗೋಶೀರ್ಷ, ಅಮುಕ್ತ, ವಜ್ರ, ಅಸ್ತರ, ಅತಿಧೇನುಕ, ಪಟ್ಟಸ, ಮುದ್ಗುರ, ಪಿನಾಕ, ಕುಂತ, ಕಾಳರಾತ್ರಿ, ಯಾಪನ, ನಳಿಕಾ, ಇವು ಪ್ರಾಚೀನ ಯುದ್ಧಗಳಲ್ಲಿ ಬಳಸುತ್ತಿದ್ದರು.

ಆನೆಗಳನ್ನು ಹೆದರಿಸುವ 'ಹಸ್ತಯಂತ್ರ' ಶತ್ರು ಸೈನ್ಯವನ್ನು ಸುಡುವ 'ಸಂಘಟ್ಟ' ಎಂಬ ಅಗ್ನಿಯಂತ್ರ, ಬೆಂಕಿ ಆರಿಸುವ ಪರ್ಜನ್ಯಕ ಎಂಬ ಉದಕಯಂತ್ರ, ಗೋಡೆ ಉರುಳಿಸುವ "ಉದ್ಘಾತಿಮಾ" ಕಲ್ಲು ಎಸೆಯುವ 'ಅಸ್ಫೋಟಿಮ', ನಡೆಯುವವರನ್ನು ಎಡವಿಸುವ 'ವಿಶ್ವಾಸಘಾತಿ' ಹೀಗೆ ಹಲವು ಯಂತ್ರಗಳ ಹಿಂದೆ ಯುದ್ಧದಲ್ಲಿ ಬಳಸಲ್ಪಡುತ್ತಿದ್ದವು.

ಆಧುನಿಕ ಯುದ್ಧ ಸಾಮಗ್ರಿಗಳ ತಯಾರಿಕೆಗೆ ಕಬ್ಬಿಣ ಬೇಕೆ ಬೇಕು, ಕೊವಿ, ತುಪಾಕಿ, ಪಿರಂಗಿ, ರೈಫಲ್, ಪಿಸ್ತೂಲ್, ಟ್ಯಾಂಕರ್ ಮುಂತಾದವುಗಳು. ಒಂದು ಕಾಲಕ್ಕೆ ಹಳ್ಳಿಯ ಕಮ್ಮಾರರು ಕೊವಿ ಮತ್ತು ಪಿಸ್ತೂಲ್‌ಗಳ ತಯಾರಿಕೆಯಲ್ಲಿ ಪರಿಣಿತರಾಗಿದ್ದರು. ಘಟಿಯಂತ್ರ, ತೈಲಯಂತ್ರ, ಇಕ್ಷುಯಂತ್ರ, ತುಲಾಯಂತ್ರ ಇವೆಲ್ಲಾ ಕಮ್ಮಾರರ ಸಂಶೋಧನೆಗಳು ಕತ್ತಿ ಎಲ್ಲಾ ಕಾರ್ಯಗಳಿಗೂ ಅಗತ್ಯ ಇವುಗಳಲ್ಲಿ ಬಹಳಷ್ಟು ವಿಧಗಳಿವೆ. ತುಳುನಾಡಿನ ಕಮ್ಮಾರರು ಆಮೇ ಕತ್ತಿ, ಇಡೆಗತ್ತಿ, ಉಳೆಕತ್ತಿ, ಕಿರ್ಗತ್ತಿ, ಒಡ್ಕತ್ತಿ, ಕಡ್ಪತ್ತಿ, ಕೆಯಿಕತ್ತಿ, ಗೆಜ್ಜೆತ್ತಿ, ತರ್ಕತ್ತಿ, ಪರ್ದತ್ತಿ, ನಾರತ್ತಿ, ಪಂತಿದಕತ್ತಿ, ಬಾಯ್‌ಕತ್ತಿ, ಬಾಳ್ಕಕ್ತಿ, ಬಿಚ್ಚುಗತ್ತಿ, ಬಿಸತ್ತಿ, ಮುಟ್ಕತ್ತಿ, ಮುಳ್ಳುಕತ್ತಿ, ಮೇಸೆಕತ್ತಿ, ದಡ್ಡ್‌ಕತ್ತಿ, ಇನ್ನೂ ಮುಂತಾದವುಗಳು.

ಯುದ್ಧದಲ್ಲಿ ಬಳಸುವ ತಳವಾರ್‌ಕತ್ತಿ, ಬಾಳ್‌ಕತ್ತಿ, ಚಂದ್ರಾಯುಧ, ಮಚ್ಚು, ಕೊಡಲಿ ಬಾಣ, ಶಲ್ಯ, ಶೂಲ, ತ್ರಿಶೂಲ, ಭರ್ಜಿಗಳ ತಯಾರಿಕೆಯಲ್ಲಿ ಇವರು ಸಿದ್ಧಹಸ್ತರು.

**ವ್ಯವಸಾಯದ ಉಪಕರಣಗಳು**

ವ್ಯವಸಾಯಕ್ಕೆ ಬೇಕಾದಂತಹ ಉಪಕರಣಗಳನ್ನು ಕಮ್ಮಾರರು ತಯಾರಿಸುತ್ತಿದ್ದರು. ಇದರಲ್ಲಿ ನೇಗಿಲು ಅತ್ಯಂತ ಪ್ರಮುಖವಾದದ್ದು. ರಾಮಾಯಣ ಮತ್ತು ಮಹಾಭಾರತದಲ್ಲಿ ನೇಗಿಲ ಉಪಯೋಗದ ಬಗ್ಗೆ ಉಲ್ಲೇಖಗಳಿವೆ. ಬಲರಾಮನಿಗೆ ನೇಗಿಲೆ ಪ್ರಮುಖ ಆಯುಧ ನೇಗಿಲಗಳಲ್ಲಿ ಸಣ್ಣ ನೇಗಿಲು, ದೊಡ್ಡ ನೇಗಿಲು, ಎಡೆ ನೇಗಿಲು, ಬಂಡೀ ನೇಗಿಲು, ಕಬ್ಬಿಣದ ನೇಗಿಲು ಹೀಗೆ ಹಲವಾರು. ನೇಗಿಲಿನಲ್ಲಿ ಮಣ್ಣನ್ನು ಆಳಕ್ಕೆ ಸೀಳುವ ಕುಳ (ಪನೋರು) ಇದನ್ನು ಕಬ್ಬಿಣದಿಂದ ಮಾಡುತ್ತಾರೆ.

ದಕ್ಷಿಣಕನ್ನಡದಲ್ಲಿ ಹಲಗೆಯನ್ನು ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಇದನ್ನು ಗುಂಟೆ ಎನ್ನುತ್ತಾರೆ. ಬೀಜ ಬಿತ್ತಲು ಕೂರಿಗೆಯನ್ನು ಮಾಡುತ್ತಾರೆ. ಮಣ್ಣನ್ನು ಅಗೆಯಲು ಮತ್ತು ತುಂಬಲು ಗುದ್ದಲಿ ಉಪಯೋಗಿಸುತ್ತಾರೆ. ಎರಡೂ ಕಡೆ ಚೂಪಾದಂತಹ ಪಿಕಾಸಿ ಇದೆ. ಕುಡಗೋಲುಮ ಮಚ್ಚು, ಉಜ್ಜೇರಿ ಇನ್ನಿತರ ಸಾಧನಗಳು.

**ಚಕ್ಕಡಿಗಳ ತಯಾರಿಕೆ**

ಚಕ್ರದ ಸಂಶೋಧನೆಯಾದ ನಂತರ ವಾಹನಗಳ ತಯಾರಿ ನಡೆಯಿತು. ಚಕ್ರದ ನಿರ್ಮಾಣ ಮರಗೆಲಸದವರ ಸಾಧನೆಯಾದರೆ ಆ ಚಕ್ರದ ಸುತ್ತ ಕಬ್ಬಿಣದ ಪಟ್ಟಿಯನ್ನು ಹೊಂದಿಸಿ ಚಕ್ರ ಸವೆಯದಂತೆ ಮಾಡಿದ ಕುಶಲತೆ ಕಮ್ಮಾರರದ್ದು. ವಾಹನಗಳಲ್ಲೆ ಮೊದಲು ಕಂಡುಹಿಡಿದಿರುವುದು ಬಂಡಿ ಬಂಡಿಗೆ ಚಕ್ರ ಜೋಡಿಸಿದಾಗ ಚಕ್ರ ಉರುಳಿ ಹೋಗದಂತೆ ಕಬ್ಬಿಣದ ಕೀಲು (ಕಡಾಣಿ) ಬೇಕು. ಕಮ್ಮಾರರು ಪುರಾಣ ಕಾಲದಲ್ಲಿ ವಿಮಾನ ತಯಾರಿಕೆಯಲ್ಲಿಯೂ ಪರಿಣಿತರಿದ್ದಾರೆಂಬ ಉಲ್ಲೇಖ ಶಿಲ್ಪ ಗ್ರಂಥಗಳಲ್ಲಿ ದೊರೆಯುತ್ತದೆ.

**ವೃತ್ತಿ ಉಪಕರಣಗಳು:**

ಮರ, ಕಂಚು, ಕಲ್ಲು, ಚಿನ್ನ, ಇತರೆ ವೃತ್ತಿಯವರಿಗೆ ಅವರವರ ವೃತ್ತಿಗೆ ಬೇಕಾದ ಉಪಕರಣಗಳ ತಯಾರಿಕೆಗೆ ಕಬ್ಬಿಣವೇ ಬೇಕು. ಅಡಿಗಲ್ಲು, ಸುತ್ತಿಗೆ, ಚಾಣ, ಕತ್ತರಿ, ಇಕ್ಕಳ, ದಂಡಾಸು, ಕಂಬಜ್ಜಿ, ಕೆತ್ತನೆಯ ಸಾಮಗ್ರಿಗಳು, ಮರ ಕೆಲಸದವರು ಬಳಸುವ ಕೀಸುಳಿ, ಗಟ್ಟಿಉಳಿ, ಕೋಲು ಉಳಿ, ತಿರುಳಿ, ಬಾಚಿ, ಕೊಡತಿ, ಬೈರಿಗೆ, ಗರಗಸ, ವೈಸ್, ಸ್ಪ್ಯಾನರ್, ಕಟ್ಟಿಂಗ್, ಪ್ಲೇಯರ್ ಮುಂತಾದ ವಸ್ತುಗಳನ್ನು ಕಮ್ಮಾರರು ತಯಾರಿಸುತ್ತಿದ್ದರು.

**ಗೃಹೋಪಯೋಗಿ ಉಪಕರಣಗಳು**

ಮಂಚ, ಕುರ್ಚಿ ಮುಂತಾದ ಪೀಠೋಪಕರಣಗಳು, ಪೆಟ್ಟಿಗೆ ಕಪಾಟುಗಳು, ತಿಜೋರಿಗಳು ಇಂದು ತಯಾರಿಲ್ಪಡುತ್ತವೆ. ಕಬ್ಬಿಣವನ್ನು ಪರಿಷ್ಕರಿಸಿ ಸ್ಟೀಲ್ ಕಂಡುಹಿಡಿಯಲ್ಪಟ್ಟ ಬಳಿಕ ಎಲ್ಲಾ ಅಡುಗೆ ಪಾತ್ರೆಗಳು ಸ್ಟೀಲ್‌ನಿಂದಲೇ ತಯಾರಾಗುತ್ತಿವೆ.

ಕಲಾತ್ಮಕ ಕೆಲಸಗಳಿಗೆ ಅವಕಾಶ ಕಡಿಮೆಯಾದರೂ ಅವಕಾಶ ಸಿಕ್ಕಿದಾಗಲೆಲ್ಲಾ ಕಮ್ಮಾರರು ತಮ್ಮ ಕೌಶಲ್ಯವನ್ನು ತೋರಿಸದೇ ಹಿಂದುಳಿಯಲಿಲ್ಲ. ಇವರ ಚಾಕಚಕ್ಯತೆಯ ಪ್ರದರ್ಶನ ಬೀಗಗಳ ತಯಾರಿಕೆಯಲ್ಲಿ ನಡೆಯಿತು. ನೂರಾರು ವಿಧಗಳು ಬೀಗಗಳನ್ನು ನಿರ್ಮಿಸಿಕೊಟ್ಟು ರಕ್ಷಣೆಯನ್ನು ಸುಲಭಗೊಳಿಸಿದರು. ಕತ್ತರಿ, ಅಡಕತ್ತರಿ, ಇಲಿ ಕತ್ತರಿ ಅವರ ಕುಶಲತೆಯನ್ನು ತೋರಿಸುವ ನಿದರ್ಶನಗಳಾಗಿವೆ.

**ಉಪಸಂಹಾರ**

ಆದಿ ಮಾನವ ಬೇಟೆಯಿಂದ ಆಹಾರ ಉತ್ಪಾದನೆಯನ್ನು ಕಂಡುಕೊಂಡ ಘಟ್ಟವನ್ನೇ ಅವನ ಬದುಕಿನ 'ಸುವರ್ಣಕಾಲ' ಎಂದು ಹೇಳಬೇಕಾಗುತ್ತದೆ. ಮೂಲ ಮಾನವ ಕೃಷಿ ಹಾಗೂ ಕಬ್ಬಿಣವನ್ನುಕಂಡುಕೊಂಡ ಮೇಲೆ ಅವನಿಗೆ ಹೊಸದೊಂದು ಜಗತ್ತು ಸೃಷ್ಟಿಸಲು ಅನುಕೂಲವಾಯಿತು. ಬೆಂಕಿಯ ಮೂಲಕ ಕಬ್ಬಿಣದ ಅದಿರನ್ನೂ ಸಂಸ್ಕರಿಸಿ ಅದರಿಂದ ಅನೇಕ ಆಯುಧಗಳನ್ನು ಹಾಗೂ ಕೃಷಿ ಉಪಕರಣಗಳನ್ನು ಸಿದ್ಧಪಡಿಸಿ ಕ್ರಿಯೆಯನ್ನೆ ಮಾಡಿದ, ಕಬ್ಬಿಣವನ್ನು ಸಂಸ್ಕರಿಸುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ. ಇದನ್ನು ಸಂಸ್ಕರಿಸಲು ಬೆಂಕಿ ಅತಿ ಮುಖ್ಯ ಹೀಗಾಗಿ ಬೆಂಕಿಯನ್ನೆ ಅವನು ತನ್ನ ಆರಾಧ್ಯ ದೈವವಾಗಿ ಪೂಜಿಸತೊಡಗಿದ. ಬೆಂಕಿಯ ಮೂಲಕ ಅಸ್ತಿತ್ವವನ್ನು ಕಂಡುಕೊಂಡ ಕಮ್ಮಾರರು ಬೆಂಕಿಯನ್ನು ಕಾಳಿ ಎಂದು ಪೂಜಿಸ ತೊಡಗಿದರು. ಕಮ್ಮಾರರು ಬೆಂಕಿ, ಕಬ್ಬಿಣ ಮತ್ತು ಕುಲುಮೆಯನ್ನು ಕಾಳಿಯ

ಪ್ರತಿರೂಪ ಎಂದು ಪೂಜಿಸಿದರು.

ಬೇಟೆ ಸಂಸ್ಕೃತಿಯಿಂದ ಕೃಷಿ ಸಾಂಸ್ಕೃತಿಕ ಮನುಷ್ಯ ಆಹಾರ ಉತ್ಪಾದನೆಯನ್ನು ಕಂಡುಕೊಂಡ ಮೇಲೆ ಆದಿ ಮಾನವ ಕಬ್ಬಿಣವನ್ನು ಕಂಡುಕೊಂಡ. ಅದರಲ್ಲಿ ಹಲವಾರು ಕೃಷಿ ಉಪಕರಣಗಳನ್ನು ಮಾಡತೊಡಗಿದ. ಬೇಡಿಕೆ ಹೆಚ್ಚಾದಂತೆಲ್ಲ ಈ ವೃತ್ತಿಯನ್ನು ತಯಾರಿಸಲಿಕ್ಕೆಂದೆ ಮೀಸಲಾದ ಕುಟುಂಬಗಳು ಬೆಳೆಯ ತೊಡಗಿದವು.

ಇತಿಹಾಸ ಕಾಲದಲ್ಲಿ ದೊಡ್ಡ ದೊಡ್ಡ ಸಾಮ್ರಾಜ್ಯಗಳು ತಲೆ ಎತ್ತಿ ಅವುಗಳ ಅಳಿವು – ಉಳಿವು ಯುದ್ಧವನ್ನು ಅವಲಂಬಿಸಿದರೆ ಯುದ್ಧದ ಸೋಲು ಗೆಲುವುಗಳು, ಶಸ್ತ್ರಾಸ್ತ್ರಗಳನ್ನು ಅವಲಂಬಿಸಿತು. ಆಗ ಕಮ್ಮಾರರ ಬೇಡಿಕೆ ಅಧಿಕವಾಯಿತು. ರಾಜ ಮಹಾರಾಜರ ಸಂಪರ್ಕ ದೊರೆತು ಕಮ್ಮಾರರ ಸ್ಥಿತಿಗತಿಗಳು ಉತ್ತಮಗೊಂಡವು.

ಭಾರತ ಸರ್ಕಾರವು 1956ರಲ್ಲಿ ಚಾಮರಾಜ ನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕು ಮಂಗಳೂರು ಮತ್ತು ಉಡುಪಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕಮ್ಮಾರ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿತು. ಆದರೆ ಈ ಸೌಲಭ್ಯವನ್ನು ಉಡುಪಿ ಮಂಗಳೂರಿನ ಕಮ್ಮಾರರು ಪಡೆಯಲೇ ಇಲ್ಲ ಎಂದು ಹೇಳಬಹುದು. ಕಾರಣ ಇವರು ವೈದಿಕ ಧರ್ಮವನ್ನು ಅವಲಂಬಿಸಿದರು. ಈ ಸೌಲಭ್ಯ ಪಡೆದುಕೊಂಡರೆ ಸಮಾಜದಲ್ಲಿ ನಮ್ಮ ಪ್ರತಿಷ್ಠೆ ಕಡಿಮೆಯಾಗುತ್ತದೆ ಎಂಬ ಭಾವನೆ ಅವರಲ್ಲಿ ಸೃಷ್ಟಿಯಾಗಿದೆ. ಕೊಳ್ಳೆಗಾಲದಲ್ಲಿರುವ ಕಮ್ಮಾರರು ಅಲ್ಪಸ್ವಲ್ಪ ಪರಿಶಿಷ್ಟ ಪಂಗಡದ ಸೌಲಭ್ಯ ಪಡೆದಿದ್ದಾರೆ. ಇತ್ತೀಚೆಗೆ ಕಮ್ಮಾರರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಿದ್ದಾರೆ.

ಸಮುದಾಯದ ಮಾಹಿತಿದಾರರ ವಿವರಗಳು

| ಕ್ರ.ಸಂ. | ಹೆಸರು | ವಯಸ್ಸು | ಊರು | ತಾಲೂಕು | ಜಿಲ್ಲೆ |
|---|---|---|---|---|---|
| 1. | ಗೋಪಾಲ ಆಚಾರ್ಯ | 45 | ಕೊಳ್ಳೆಗಾಲ | ಕೊಳ್ಳೆಗಾಲ | ಚಾಮರಾಜ ನಗರ |
| 2. | ಗಣಪಯ್ಯ ಆಚಾರ್ಯ | 50 | ಹಾನಾಪುರ | ಕೊಳ್ಳೆಗಾಲ | ಚಾಮರಾಜ ನಗರ |
| 3. | ರುದ್ರಚಾರಿ | 37 | ಕಣ್ಣೂರು | ಕೊಳ್ಳೆಗಾಲ | ಚಾಮರಾಜ ನಗರ |
| 4. | ಮಂಟೇಲಿಂಗಾಚಾರಿ | 57 | ಹಲಗೂರು | ಕೊಳ್ಳೆಗಾಲ | ಚಾಮರಾಜ ನಗರ |
| 5. | ಸಿದ್ದಪ್ಪಾಚಾರಿ | 33 | ಕಾಮಗೆರೆ | ಕೊಳ್ಳೆಗಾಲ | ಚಾಮರಾಜ ನಗರ |
| 6. | ಶ್ರೀನಿವಾಸ ಆಚಾರ್ಯ | 47 | ಹೆಬ್ರಿ | ಕಾರ್ಕಳ | ಉಡುಪಿ |
| 7. | ಕೇಶವ ಆಚಾರ್ಯ | 57 | ಸಾಣೂರು | ಕಾರ್ಕಳ | ಉಡುಪಿ |
| 8. | ಗೋಪಾಲ ಆಚಾರ್ಯ | 42 | ಹೆಬ್ರಿ | ಕಾರ್ಕಳ | ಉಡುಪಿ |
| 9. | ಅಚ್ಚುತ ಆಚಾರ್ಯ | 40 | ಹೆಬ್ರಿ | ಕಾರ್ಕಳ | ಉಡುಪಿ |
| 10. | ಅಣ್ಣಿ ಆಚಾರ್ಯ | 57 | ಸಾಣೂರು | ಕಾರ್ಕಳ | ಉಡುಪಿ |
| 11. | ಅಣ್ಣಪ್ಪಯ್ಯ ಆಚಾರ್ಯ | 65 | ಹೆಮ್ಮುಂಜೆ | ಕುಂದಾಪುರ | ಉಡುಪಿ |
| 12. | ಪ್ರಭಾಕರ ಆಚಾರ್ಯ | 50 | ಕಿರಿಮಂಜೇಶ್ವರ | ಕುಂದಾಪುರ | ಉಡುಪಿ |
| 13. | ಆನಂದ | 50 | ಕುಂದಬಾರಂದಡಿ | ಕುಂದಾಪುರ | ಉಡುಪಿ |
| 14. | ಪುಟ್ಟಯ್ಯ ಆಚಾರ್ಯ | 65 | ಆಲೂರು | ಕುಂದಾಪುರ | ಉಡುಪಿ |
| 15. | ಲಕ್ಷ್ಮೀ ನಾರಾಯಣ | 56 | ಗೋಪಾಡಿ | ಕುಂದಾಪುರ | ಉಡುಪಿ |
| 16. | ಕರುಣಾಕರ | 35 | ಮುಂಡಾಜೆ | ಬೆಳ್ತಂಗಡಿ | ಮಂಗಳೂರು |
| 17. | ದಿನೇಶ ಆಚಾರ್ಯ | 23 | ಉಜಿರೆ | ಬೆಳ್ತಂಗಡಿ | ಮಂಗಳೂರು |
| 18. | ಕೃಷ್ಣಯ್ಯ ಆಚಾರ್ಯ | 45 | ಉಜಿರೆ | ಬೆಳ್ತಂಗಡಿ | ಮಂಗಳೂರು |
| 19. | ಜನಾರ್ಧನ ಆಚಾರ್ಯ | 45 | ಕುಕ್ಕುಂದ | ಸುಳ್ಯ | ಮಂಗಳೂರು |
| 20. | ಗಿರೀಶ ಆಚಾರ್ಯ | 33 | ಸುಬ್ರಹ್ಮಣ್ಯ | ಸುಳ್ಯ | ಮಂಗಳೂರು |
| 21. | ರಾಮಣ್ಣ ಆಚಾರ್ಯ | 56 | ಕುಕ್ಕಂದೂರು | ಸುಳ್ಯ | ಮಂಗಳೂರು |
| 22. | ಲಿಂಗಪ್ಪ ಆಚಾರ್ಯ | 65 | ಕೊಕ್ಕಡ | ಪುತ್ತೂರು | ಮಂಗಳೂರು |
| 23. | ವಾಸುದೇವ ಆಚಾರ್ಯ | 49 | ಕುಂಟ್ಯಾನ | ಪುತ್ತೂರು | ಮಂಗಳೂರು |
| 24. | ಶ್ರೀಧರ | 31 | ಈಶ್ವರ ಮಂಗ | ಪುತ್ತೂರು | ಮಂಗಳೂರು |
| 25. | ನಾರಾಯಣ ಆಚಾರ್ಯ | 50 | ಕೆಮ್ಮಾಯ | ಪುತ್ತೂರು | ಮಂಗಳೂರು |
| 26. | ಸೀತಾರಾಮ ಆಚಾರ್ಯ | 55 | ಸೂರಿಂಜೆ | ಮಂಗಳೂರು | ಮಂಗಳೂರು |
| 27. | ದೇವಿದಾಸ ಆಚಾರ್ಯ | 45 | ತೊಕ್ಕುಟ್ಟು | ಮಂಗಳೂರು | ಮಂಗಳೂರು |
| 28. | ಸಂತೋಷ | 25 | ಪಡುಬಿದ್ರಿ | ಉಡುಪಿ | ಉಡುಪಿ |
| 29. | ಮಂಜುನಾಥ ಆಚಾರ್ಯ | 35 | ಸೇನಾಪುರ | ಕುಂದಾಪುರ | ಉಡುಪಿ |
| 30. | ಸೀನ ಆಚಾರ್ಯ | 55 | ಕಂಡ್ಲೂರು | ಕುಂದಾಪುರ | ಕುಂದಾಪುರ |
| 31. | ವಿಠ್ಠಲ ಆಚಾರ್ಯ | 52 | ಸಂತೆಕಟ್ಟೆ | ಉಡುಪಿ | ಉಡುಪಿ |
| 32. | ಕೃಷ್ಣಯ್ಯ ಆಚಾರ್ಯ | 54 | ಕರ್ಜೆ | ಉಡುಪಿ | ಉಡುಪಿ |
| 33. | ಅಚ್ಚುತ ಆಚಾರ್ಯ | 60 | ನಲ್ಲೂರು | ಕಾರ್ಕಳ | ಉಡುಪಿ |
| 34. | ದಾಮೋದರ ಆಚಾರ್ಯ | 55 | ಮೀಯಾರು | ಕಾರ್ಕಳ | ಉಡುಪಿ |
| 35. | ಗಣಪತಿ | 38 | ಬಜೆಗೋಳಿ | ಕಾರ್ಕಳ | ಉಡುಪಿ |

## References


### English Books

1. Anand K. Koomaraswamy – Arts and crafts of India
2. Edgar Thurston & Rangachar – Caste and Tribes of South India.
3. Enthoven R.E. – The tribes and caste of Bombay
4. David N. Lorenjen – Kapalikas and Kalamukhas.
5. Jan Brouwer – The makers of the world.
6. Sherring M.A. – Hindu Tribes and Caste (vol. 3)
7. Suryanath Kamath – Mysore Gazeteer
8. Haranoor L.G. – Karnataka Backward Commission Report
9. Ananda K. Koomaraswamy – Vishwakarma (Series)
10. Dubois Abbe – Hindu manners, customs and ceremories

### Kannada Books

1. ಈರಣ್ಣ ಕೆ.ಪಿ. – ಕರ್ನಾಟಕ ವಿಶ್ವಕರ್ಮ ಮಹಾಪುರುಷರು ಭುವನೇಶ್ವರಿ ಸಾಹಿತ್ಯ ಪ್ರಕಾಶನ ಶಿರಹಟ್ಟಿ
2. ಕಲವೀರ ಮನ್ವಾಚಾರ್ – ಮಾತೃದೇವತಾ ಆರಾಧನೆ (ಎಂ.ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
3. ಕುಮಾರ್ ಆರ್.ಬಿ. – ಮುದ್ದೆ ಕಂಬಾರರು ಸಾರಾ ಎಂಟರ್‌ಪ್ರೈಸಸ್, ಮೈಸೂರು
4. ಗಂಗಾಧರ ದೈವಜ್ಞ – ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ ಭಾಗೀರಥಿ ಪ್ರಕಾಶನ ಹೊಸಪೇಟೆ
5. ಗಂಗಾಧರ ದೈವಜ್ಞ – ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ
6. ಗುರುಲಿಂಗಾಚಾರ್ಯ – ವಿಶ್ವಕರ್ಮ ಗುಣಗಾನ, ವಿಶ್ವಕರ್ಮ ಪ್ರಕಾಶನ, ತುಮಕೂರು
7. ಚಂದ್ರಶೇಖರ ಆಚಾರ್ಯ – ವಿಶ್ವಬ್ರಾಹ್ಮಣ ಧರ್ಮ, ಜ್ಞಾನ ಭಂಡಾರ ಪ್ರಕಾಶನ, ಕೆ.ಜಿ.ಎಫ್.
8. ಜೀವಣ್ಣ ಮಸಳಿ – ಮೌನೇಶ್ವರ ವಚನ ಸಂಗ್ರಹ, ವಿಶ್ವದರ್ಶನ ಪ್ರಕಾಶನ, ಬಾಗಲಕೋಟೆ
9. ದೀಕ್ಷಿತ್ ವಿ.ಜಿ. ಕರ್ನಾಟಕದಲ್ಲಿ ವಿಶ್ವಬ್ರಾಹ್ಮಣ ಧರ್ಮ ಮತ್ತು ಸಂಸ್ಕೃತಿ, ವಿಶ್ವಕರ್ಮ ಪ್ರಕಾಶನ ಧಾರವಾಡ
10. ಮುತ್ತಾಚಾರ್ ಟಿ.ವಿ – ವಿಶ್ವಕರ್ಮ ವಂಶ ವಿಕಾಸ ಭಾಗ – 1
11. ಮೈತ್ರಿ ಕೆ.ಎಂ. – ಬುಡಕಟ್ಟು ಕುಲಕಸುಬುಗಳ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
12. ವಾಸುದೇವ ಬಡಿಗೇರ – ಸಂಡೂರಿನ ಕಾರ್ತಿಕೇಯ ತಪೋವನ
13. ವಿರೂಪಾಕ್ಷ ಬಡಿಗೇರ – ಶಿರಸಂಗಿ ಸಂಸ್ಥಾನ ಒಂದು ಅಧ್ಯಯನ ಲಿಂಗರಾಜ ವಿವಿದೋದ್ದೇಶ ಸಂಸ್ಥೆ ಧಾರವಾಡ
14. ಜ್ಞಾನಾನಂದ ಜಿ. – ಸಂಸ್ಕೃತಾನುಕರಣ ಮತ್ತು ವಿಶ್ವಬ್ರಾಹ್ಮಣರು
15. ಜ್ಞಾನಾನಂದ ಜಿ. – ವಿಶ್ವಕರ್ಮಾಪಖ್ಯಾನ ಸಂಕೃತಿ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು